ವಿಷಯಾನುಕ್ರಮಣಿಕೆ

ಅಧ್ಯಾತ್ಮಗ್ರಂಥಾವಳಿ

# ಶ್ರೀರಾಮಗೀತೆ

(ಭಾವಾರ್ಥಟಿಪ್ಪಣಿಗಳೊಡನೆ)

ಬರೆದವರು :
ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೭೬

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
1999

ಮೊದಲನೆಯ ಸಂಸ್ಕರಣ : 1942 (1000 ಪ್ರತಿಗಳು)
ಎರಡನೆಯ ಸಂಸ್ಕರಣ : 1962 (2000 ಪ್ರತಿಗಳು)
ಮೂರನೆಯ ಸಂಸ್ಕರಣ : 1999 (2000 ಪ್ರತಿಗಳು)

**ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು**
(All Rights Reserved)

ಅಕ್ಷರ ಜೋಡಣೆ:
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. 213, ಬಾಲಾಜಿ ರಸ್ತೆ,
ತ್ಯಾಗರಾಜನಗರ, ಬೆಂಗಳೂರು - 28 ದೂ: 667716

ಮುದ್ರಣಸ್ಥಾನ:
**ಶ್ರೀ ಗಣೇಶಮಾರುತಿ ಪ್ರಿಂಟರ್ಸ್**
76, ಮೂರನೇ ಬ್ಲಾಕ್, 6ನೇ ಮೇನ್
ತ್ಯಾಗರಾಜನಗರ, ಬೆಂಗಳೂರು - 560 028
ದೂರವಾಣಿ : 6528542

# ಒಂದನೆಯ ಸಂಸ್ಕರಣದ ಪೀಠಿಕೆ

ಅಧ್ಯಾತ್ಮರಾಮಾಯಣವು ಶ್ರೀಮದ್ರಾಮಾಯಣಕ್ಕಿಂತ ಗಾತ್ರದಲ್ಲಿ ಸಣ್ಣದಾದರೂ ಕೀರ್ತಿಯಲ್ಲಿ ಕಡಿಮೆಯಾಗಿಲ್ಲ. ಅದರ ಲಲಿತವಾದ ಭಾಷೆಯೂ ಭಕ್ತಿಜ್ಞಾನವೈರಾಗ್ಯಗಳನ್ನು ವರ್ಣಿಸುತ್ತಾ ಕಥಾವೃತ್ತಾಂತವನ್ನು ಸಾಗಿಸುವ ಕ್ರಮವೂ ಅದರಲ್ಲಿ ಜನಾನುರಾಗವನ್ನು ಹೆಚ್ಚಿಸಿರುತ್ತದೆ. ಅಲ್ಲಲ್ಲಿಗೆ ಸೇರಿಸಿರುವ ಸ್ತೋತ್ರಗಳನ್ನಂತೂ ಹಲವು ಜನರು ಬೇರೆಬೇರೆಯಾಗಿಯೇ ಹೇಳಿಕೊಂಡು ಭಾವಭಕ್ತಿಯ ಸವಿಯನ್ನು ಕಂಡುಕೊಳ್ಳುತ್ತಿದ್ದಾರೆ. ಸ್ವಲ್ಪದರಲ್ಲಿ ಹೇಳಿದರೆ ಭಾಗವತವು ಮಹಾವಿಷ್ಣುವಿನ ಕೃಷ್ಣಾವತಾರಕ್ಕೆ ಕೊಟ್ಟಿರುವ ಪ್ರಾಧಾನ್ಯವನ್ನು ಈ ರಾಮಾಯಣವು ರಾಮಾವತಾರಕ್ಕೆ ಕೊಟ್ಟು ಸ್ವಲ್ಪದರಲ್ಲಿ ಮುಕ್ತಿಮಾರ್ಗವನ್ನು ಸುಪಥವಾಗಿ ಮಾಡಿದೆಯೆನ್ನಬಹುದು.

ಈ ರಾಮಾಯಣದಲ್ಲಿ **ರಾಮಹೃದಯ, ರಾಮಗೀತೆ**- ಇವೆರಡನ್ನೂ ಅನರ್ಘ್ಯವಾದವುಗಳೆಂದು ಗ್ರಂಥಕರ್ತರೇ ಭಾವಿಸಿರುತ್ತಾರೆಂಬುದಕ್ಕೆ ಮಾಹಾತ್ಮ್ಯ ಸರ್ಗದಲ್ಲಿ ಇವುಗಳ ವಿಷಯಕ್ಕೆ ಕೊಟ್ಟಿರುವ ಸ್ಥಾನಮಾನವೇ ಸಾಕ್ಷಾದಷ್ಟು ಆಧಾರವಾಗಿದೆ. ಅದರಲ್ಲಿಯೂ ರಾಮಗೀತೆಯು ಅಧ್ಯಾತ್ಮರಾಮಾಯಣಕಾರರಿಗೆ ಹೆಚ್ಚು ಮೆಚ್ಚಾಗಿದೆ ಯೆಂಬುದು ಸ್ಪಷ್ಟವಾಗಿದೆ. ಏಕೆಂದರೆ ಮಾಹಾತ್ಮ್ಯಸರ್ಗದಲ್ಲಿರುವ ಅರವತ್ತು ಶ್ಲೋಕಗಳಲ್ಲಿ ಹದಿಮೂರು ಶ್ಲೋಕಗಳಿಂದ ಇದನ್ನು ಅವರು ಹೊಗಳಿರುತ್ತಾರೆ. ರಾಮ ಹೃದಯ, ರಾಮಗೀತೆ- ಇವೆರಡನ್ನೂ ಹೊರಕ್ಕೆ ತರುವ ಸುಯೋಗವನ್ನು ಒದಗಿಸಿಕೊಟ್ಟ ಶ್ರೀರಾಮಚಂದ್ರನಿಗೆ ಅಡಿಗಡಿಗೆ ನನ್ನ ನಮಸ್ಕಾರಗಳನ್ನು ಸಮರ್ಪಿಸುತ್ತೇನೆ.

ರಾಮಗೀತೆಯಲ್ಲಿ ೮ ರಿಂದ ೨೩ನೆಯ ಶ್ಲೋಕದವರೆಗೆಗಿನ ಅಭಿಪ್ರಾಯವು ಸ್ವಲ್ಪ ಹೆಚ್ಚು ಕಡಿಮೆಯಾಗಿ ಅದೇ ಮಾತುಗಳಲ್ಲಿ **ಉಪದೇಶಸಾಹಸ್ರಿಯ ಉಪೋದ್ಘಾತಪ್ರಕರಣದಲ್ಲಿ** ಕಂಡುಬರುತ್ತವೆ. ಇದೇ ಗೀತೆಯ ೪೮ರಿಂದ ೫೫ನೆಯ ಶ್ಲೋಕದವರೆಗಿನ ಅಭಿಪ್ರಾಯವು **ಪಂಚೀಕರಣವಾರ್ತಿಕದಲ್ಲಿ** ಕಂಡುಬರುತ್ತವೆ. ಇಷ್ಟೊಂದು ಹೋಲಿಕೆಯು ಈ ಗ್ರಂಥಗಳಲ್ಲಿ ಕಂಡು ಬರುವವರ ರಹಸ್ಯವೇನೆಂಬುದನ್ನು ತತ್ತ್ವಶೋಧಕರು ನಿರ್ಣಯಿಸಬೇಕಾಗಿದೆ. ಉಪದೇಶಸಾಹಸ್ರಿಯನ್ನೂ ಪಂಚೀಕರಣ

ವಾರ್ತಿಕವನ್ನೂ ಆಗಲೆ ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ಪ್ರಕಟಿಸಿರುವುದರಿಂದ ಮೇಲೆ ಸೂಚಿಸಿರುವ ರಾಮಗೀತೆಯ ಭಾಗಗಳ ಅಭಿಪ್ರಾಯವನ್ನು ವಿಸ್ತಾರವಾಗಿ ತಿಳಿಯಬೇಕೆನ್ನುವವರಿಗೆ ಆ ಎರಡು ಗ್ರಂಥಗಳಲ್ಲಿಯೂ ಸಹಾಯವು ದೊರೆಯುವ ದೆಂಬುದನ್ನು ಹೇಳಬೇಕಾದದ್ದೆ ಇಲ್ಲ.

ಅಧ್ಯಾತ್ಮರಾಮಾಯಣದಲ್ಲಿರುವ ವೇದಾಂತಪ್ರಕ್ರಿಯೆಯ ವಿಚಾರವಿಮರ್ಶೆಗೆ ಇದು ಸ್ಥಳವಲ್ಲ. ರಾಮಗೀತೆಯಲ್ಲಿರುವಷ್ಟು ಭಾಗದಲ್ಲಿ ಜ್ಞಾನವೊಂದೇ ಮುಕ್ತಿಗೆ ಸಾಧನವೆಂದೂ ಗುರುಮೂಲಕವಾಗಿ ವೇದಾಂತಶ್ರವಣವನ್ನು ಮಾಡಿ ಮಹಾವಾಕ್ಯ ವಿಚಾರದಿಂದ ಪದಾರ್ಥವಿವೇಕವನ್ನು ಮಾಡಿಕೊಂಡು ಸಿದ್ಧವಾದ ಪರಮಾರ್ಥತತ್ತ್ವವನ್ನೇ ಚಿಂತಿಸುತ್ತಿರಬೇಕೆಂದೂ ಅವಸ್ಥಾತ್ರಯಗಳಲ್ಲಿ ವಾಚ್ಯವಾಚಕರೂಪವಾಗಿ ಕಂಡುಬರುವ ಪ್ರಪಂಚವೆಲ್ಲವನ್ನೂ ಪರಮಾರ್ಥದಲ್ಲಿ ಲಯಗೊಳಿಸಿಕೊಳ್ಳುವ ಸಮಾಧಿಯಿಂದ ಸಾಕ್ಷಾತ್ಕಾರವನ್ನು ಪಡೆಯಬೇಕೆಂದೂ ಉಪದೇಶಿಸಿರುತ್ತದೆ.

ಜ್ಞಾನಕ್ಕೆ ಭಕ್ತಿಯು ಮುಖ್ಯಸಾಧನವೆಂದು ಹೇಳಿರುವದು ಅಧ್ಯಾತ್ಮ ರಾಮಾಯಣದಲ್ಲಿರುವ ಒಂದು ವಿಶೇಷವು. ಭಕ್ತಿಯು ನಿರ್ಗುಣಭಕ್ತಿಯೆಂದೂ ಸಗುಣಭಕ್ತಿಯೆಂದೂ ಎರಡು ಬಗೆಯಾಗಿರುತ್ತದೆ. ಸಗುಣ ನಿರ್ಗುಣಭಕ್ತಿಗಳನ್ನು ಕ್ರಮಕ್ರಮವಾಗಿ ಅನುಷ್ಠಾನಕ್ಕೆತಂದವರಿಗೆ ಪರಮೇಶ್ವರನ ಅನುಗ್ರಹದಿಂದ ತತ್ತ್ವಜ್ಞಾನವೂ ಮೋಕ್ಷವೂ ಸುಲಭವಾಗಿ ಲಭಿಸುವವು- ಎಂದು ಇಲ್ಲಿ ಹೇಳಿರುತ್ತದೆ.

ಶ್ರೀರಾಮಗೀತೆಯ ಮೂಲವನ್ನು ಎರಡು ಮುದ್ರಿತಪ್ರತಿಗಳ ಸಹಾಯದಿಂದ ಶುದ್ಧಿಮಾಡಿಕೊಂಡು ಬರೆದಿದ್ದೇನೆ. ಅಲ್ಲಲ್ಲಿ ಪಾಠಾಂತರವನ್ನು ಸೂಚಿಸಿ ಶ್ಲೋಕಾಭಿಪ್ರಾಯವನ್ನು ವಿವರಿಸುವ ಟಿಪ್ಪಣಿಯನ್ನೂ ಕೊಟ್ಟಿರುತ್ತೇನೆ. ವಿಷಯ ವಿಭಾಗವನ್ನು ತೋರಿಸುವ ತಲೆಬರಹವು ಜಿಜ್ಞಾಸುಗಳಿಗೆ ಪ್ರಯೋಜನವಾಗುವದೆಂದು ನನ್ನ ನಂಬಿಕೆ. ಶ್ರೀರಾಮಹೃದಯದಂತೆ ಇದೂ ಕೆಲವರು ರಾಮಭಕ್ತರ ಹೃದಯದ ಮೇಲೆ ಪರಿಣಾಮಮಾಡಿದರೆ ನಾನು ಧನ್ಯನು.

ಚಿತ್ರಭಾನು,<br>
ಆಷಾಢ ವದಿ ೨ ಲೇಖಕ

## ಎರಡನೆಯ ಸಂಸ್ಕರಣದ ಪೀಠಿಕೆ

ಈ ಸಂಸ್ಕರಣದಲ್ಲಿ ಅನುವಾದವನ್ನೂ ಟಿಪ್ಪಣಿಯನ್ನೂ ಸಂಪೂರ್ಣವಾಗಿ ಪರಿಷ್ಕರಿಸಲಾಗಿದೆ. ಪರಿಶಿಷ್ಟದಲ್ಲಿ ಉಪದೇಶಸಾಹಸ್ರಿಯ ಉಪೋದ್ಘಾತಪ್ರಕರಣಕ್ಕೂ ರಾಮಗೀತೆಯ ಶ್ಲೋಕಗಳಿಗೂ ಇರುವ ಹೋಲಿಕೆಯನ್ನು ಸ್ಫುಟಗೊಳಿಸುವಷ್ಟು ಶ್ಲೋಕಭಾಗವನ್ನು ಸೇರಿಸಿದೆ.

ಕಾರ್ಯಾಲಯದಲ್ಲಿ ಪ್ರಕಟವಾಗಿರುವ ಪ್ರಕರಣಗಳು **೪ನೆಯ ಸಂಪುಟದಲ್ಲಿ** ಅಡಕವಾಗಿರುವ **"ತತ್ತ್ವೋಪದೇಶ"**ದಲ್ಲಿರುವ ಮಹಾವಾಕ್ಯದ ವಿವರಣೆಯು ರಾಮಗೀತೆಯಲ್ಲಿರುವ ವಿವರಣೆಯನ್ನೇ ಹೋಲುತ್ತಿದೆ. ಆ ಪ್ರಕರಣವನ್ನು ಪರಿಶೀಲಿಸುವವರಿಗೆ ರಾಮಗೀತೆಯ ಪ್ರಕ್ರಿಯೆಯ ಅರಿವನ್ನು ಮಾಡಿಕೊಳ್ಳುವದಕ್ಕೆ ಸಹಾಯವಾಗುವದು.

ಈಗಿನ ರೂಪದಲ್ಲಿ ಗ್ರಂಥವು ವಾಚಕರಿಗೆ ಮೊದಲಿಗಿಂತಲೂ ಹೆಚ್ಚು ಪ್ರಯೋಜನಕಾರಿಯಾದೀತೆಂದು ನಂಬಲಾಗಿದೆ.

ಪ್ಲವಸಂವತ್ಸರ
ಮಾಘ ಶುದ್ಧ ಪೌರ್ಣಿಮೆ **ಪ್ರಕಾಶಕರು**

## ಮೂರನೆಯ ಸಂಸ್ಕರಣದ ಪೀಠಿಕೆ

ಈ ಗ್ರಂಥದ ಪ್ರತಿಗಳೆಲ್ಲವೂ ಮುಗಿದು ಹೋಗಿದ್ದುದರಿಂದ ಈಗ ಮೂರನೆಯ ಬಾರಿಗೆ ಗ್ರಂಥವನ್ನೊಮ್ಮೆ ಶೋಧಿಸಿ ಪ್ರಕಟಿಸಲಾಗಿದೆ. ವಾಚಕರು ಎಂದಿನಂತೆ ಗ್ರಂಥವನ್ನು ಸ್ವೀಕರಿಸಿ ಪ್ರೋತ್ಸಾಹಿಸಬೇಕಾಗಿ ಕೋರಿದೆ.

ಇದರೊಡನೆ **ವಾಗ್ದೇವೀ ಸ್ತೋತ್ರ**ವೆಂಬ ಒಂದು ಕೃತಿಯನ್ನೂ ಜೋಡಿಸಲಾಗಿದೆ. ಇದು ಕೂಡ **ರಾಮಗೀತಾ ಲೇಖಕರ** ಕೃತಿಯೇ ಆಗಿದೆ.

ತಾ|| 15-10-1999 ಇತಿ- ಪ್ರಕಾಶಕರು

## ವಿಷಯಾನುಕ್ರಮಣಿಕೆ

ಪೀಠಿಕೆ


| | | ಪುಟ |
|---|---|---|
| ವಿಷಯಪ್ರವೇಶ | ...... | ೧ |
| ಲಕ್ಷ್ಮಣನ ಪ್ರಶ್ನೆ | ...... | ೨ |
| ಶ್ರೀರಾಮರ ಉತ್ತರ | ...... | ೩ |
| ಅಧಿಕಾರವಿಚಾರ | ...... | ೩ |
| ಸಮುಚ್ಚಯವಾದಿಗಳ ಪೂರ್ವಪಕ್ಷ | ...... | ೫ |
| ಸಮುಚ್ಚಯವಾದದ ಖಂಡನೆ | ...... | ೬ |
| ಮಹಾವಾಕ್ಯವಿಚಾರ | ...... | ೧೧ |
| ತ್ವಂಪದಾರ್ಥಶೋಧನೆ | ...... | ೧೩ |
| ಪರಮಾತ್ಮನಲ್ಲಿ ಜಗತ್ತಿನ ಅಧ್ಯಾಸ | ...... | ೧೭ |
| ಆತ್ಮಜ್ಞಾನಿಯ ಅನುಸಂಧಾನ | ...... | ೨೦ |
| ಪ್ರಪಂಚವನ್ನು ಆತ್ಮನಲ್ಲಿ ಲಯಗೊಳಿಸುವ ರೀತಿ | ...... | ೨೧ |
| ಆತ್ಮಸಮಾಧಿಯ ಫಲ | ...... | ೨೩ |
| ಭಕ್ತಿಯೇ ಜ್ಞಾನಕ್ಕೆ ಸಾಧನ | ...... | ೨೫ |
| ಉಪಸಂಹಾರ | ...... | ೨೬ |
| ರಾಮಗೀತಾಮಾಹಾತ್ಮ್ಯ | ...... | ೨೯ |
| ಪರಿಶಿಷ್ಟ | ...... | ೩೨ |
| ಶ್ಲೋಕಾನುಕ್ರಮಣಿಕೆ | ...... | ೩೪ |

॥ ಶ್ರೀರಾಮಚಂದ್ರಪರಬ್ರಹ್ಮಣೇ ನಮಃ ॥

# ಶ್ರೀರಾಮಗೀತೆ

## ವಿಷಯಪ್ರವೇಶ

**ಶ್ರೀಮಹಾದೇವ ಉವಾಚ-**

**ತತೋ ಜಗನ್ಮಙ್ಗಲಮಙ್ಗಲಾತ್ಮನಾ**
**ವಿಧಾಯ ರಾಮಾಯಣಕೀರ್ತಿಮುತ್ತಮಾಮ್ ।**
**ಚಚಾರ ಪೂರ್ವಾಚರಿತಂ ರಘೂತ್ತಮೋ**
**ರಾಜರ್ಷಿವರ್ಯೈರಭಿಸೇವಿತಂ ಯಥಾ ॥ ೧ ॥**

೧. ಬಳಿಕ ಆ ರಘುಶ್ರೇಷ್ಠನು ಜಗತ್ತಿಗೇ ಕಲ್ಯಾಣವನ್ನುಂಟುಮಾಡುವ ಮಂಗಲಸ್ವರೂಪದಿಂದ ಉತ್ತಮವಾದ ರಾಮಾಯಣಕೀರ್ತಿಯನ್ನು ಹಬ್ಬಿಸಿ ಹಿಂದೆ ರಾಜರ್ಷಿಶ್ರೇಷ್ಠರು ಯಾವ ಆಚಾರವನ್ನಿಟ್ಟುಕೊಂಡಿದ್ದರೋ ಅದನ್ನೇ ಅನುಸರಿಸಿಕೊಂಡಿದ್ದನು.

**ಸೌಮಿತ್ರಿಣಾ ಪೃಷ್ಟ ಉದಾರಬುದ್ಧಿನಾ**
**ರಾಮಃ ಕಥಾಃ ಪ್ರಾಹ ಪುರಾತನೀಃ ಶುಭಾಃ ।**
**ರಾಜ್ಞಃ ಪ್ರಮತ್ತಸ್ಯ ನೃಗಸ್ಯ ಶಾಪತೋ**
**ದ್ವಿಜಸ್ಯ ತಿರ್ಯಕ್ತ್ವಮಥಾಹ ರಾಘವಃ ॥ ೨ ॥**

೨. ಉದಾರಬುದ್ಧಿಯ ಸೌಮಿತ್ರಿಯು ಕೇಳಲಾಗಿ ರಾಮನು ಹಿಂದಿನ ಪುಣ್ಯಕಥೆಗಳನ್ನು ಹೇಳುತ್ತಿದ್ದನು ; ಮತ್ತು ಅತ್ಯಂತವಾಗಿ ಮತ್ತನಾದ ನೃಗನೆಂಬ[1] ಅರಸನು ಬ್ರಾಹ್ಮಣಶಾಪದಿಂದ ತಿರ್ಯಗ್ಜಂತುವಾದ ಕಥೆಯನ್ನೂ ರಾಘವನು ಹೇಳಿದನು.

---

1. ನೃಗನೆಂಬ ರಾಜನು ಒಂದೇ ಗೋವನ್ನು ಇಬ್ಬರು ಬ್ರಾಹ್ಮಣರಿಗೆ ದಾನ ಮಾಡಿದ ಅಪರಾಧಕ್ಕಾಗಿ ಶಾಪದಿಂದ ಓತಿಕೇತನ ಜನ್ಮವನ್ನು ಪಡೆದನೆಂದು ಕಥೆ.

**ಕದಾಚಿದೇಕಾನ್ತ ಉಪಸ್ಥಿತಂ ಪ್ರಭುಂ**
**ರಾಮಂ ರಮಾಲಾಲಿತಪಾದಪಙ್ಕಜಮ್ ।**
**ಸೌಮಿತ್ರಿರಾಸಾದಿತಶುದ್ಧಭಾವನಃ**
**ಪ್ರಣಮ್ಯ ಭಕ್ತ್ಯಾ ವಿನಯಾನ್ವಿತೋಽಬ್ರವೀತ್ ॥ ೩ ॥**

೩. ಒಂದಾನೊಂದು ಕಾಲದಲ್ಲಿ ಆ ಪ್ರಭುರಾಮನು, ಸೀತಾದೇವಿಯಿಂದ ಪಾದಪದ್ಮವನ್ನು ಒತ್ತಿಸಿಕೊಳ್ಳುತ್ತಾ ಏಕಾಂತದಲ್ಲಿ ಕುಳ್ಳಿರಲು, ಶುದ್ಧಭಾವನೆಯಿಂದೊಡಗೂಡಿದ ಸೌಮಿತ್ರಿಯು ಭಕ್ತಿಯಿಂದೆರಗಿ ವಿನಯದಿಂದ ಕೂಡಿ ಇಂತೆಂದನು:

## ಲಕ್ಷ್ಮಣನ ಪ್ರಶ್ನೆ

**ತ್ವಂ ಶುದ್ಧಬುದ್ಧೋಽಸಿ ಹಿ ಸರ್ವದೇಹಿನಾ-**
**ಮಾತ್ಮಾಸ್ಯಧೀಶೋಽಸಿ ನಿರಾಕೃತಿಃ ಸ್ವಯಮ್ ।**
**ಪ್ರತೀಯಸೇ ಜ್ಞಾನದೃಶಾಂ ಮಹಾಮತೇ**
**ಪಾದಾಬ್ಜಭೃಙ್ಗಾಯಿತಸಙ್ಗಸಙ್ಗಿನಾಮ್ ॥ ೪ ॥**

೪. ಸರ್ವಜ್ಞನಾದ ರಾಮನೆ, ನೀನು ಶುದ್ಧಜ್ಞಾನಸ್ವರೂಪನಾಗಿರುವೆ, ಸಕಲಜೀವರುಗಳಿಗೂ ಆತ್ಮನಾಗಿರುವೆ, ಒಡೆಯನಾಗಿರುವೆ. ನಿನಗೆ ಸ್ವತಃ ಯಾವ ಆಕಾರವೂ ಇಲ್ಲ. ಎಲೈ ಮಹಾಮತಿಯೆ, ನಿನ್ನ ಪಾದ ಕಮಲಕ್ಕೆ ಭೃಂಗಗಳಂತಿರುವವರ ಸಂಗದಲ್ಲಿಯೇ ಆಸಕ್ತಿಯುಳ್ಳ ಜ್ಞಾನದೃಷ್ಟಿಯುಳ್ಳ ಜನರಿಗೆ ಮಾತ್ರವೇ ತಿಳಿಯಬರುತ್ತೀಯೆ.

**ಅಹಂ ಪ್ರಪನ್ನೋಽಸ್ಮಿ ಪದಾಮ್ಬುಜಂ ಪ್ರಭೋ**
**ಭವಾಪವರ್ಗಂ ತವ ಯೋಗಿಭಾವಿತಮ್ ।**
**ಯಥಾಞ್ಜಸಾ ಜ್ಞಾನಮಪಾರವಾರಿಧಿಂ**
**ಸುಖಂ ತರಿಷ್ಯಾಮಿ ತಥಾನುಶಾಧಿ ಮಾಮ್ ॥ ೫ ॥**

೫. ಪ್ರಭುವೆ, ಯೋಗಿಗಳು ಧ್ಯಾನಿಸುತ್ತಿರುವಂಥ, ಸಂಸಾರದಿಂದ ಬಿಡುಗಡೆಯನ್ನು ಕೊಡುವಂಥ, ನಿನ್ನ ಪಾದಕಮಲವನ್ನು ಶರಣುಹೊಕ್ಕಿದ್ದೇನೆ. ದಡವಿಲ್ಲದ ಕಡಲಿನಂತಿರುವ ಜ್ಞಾನವನ್ನು ನಾನು ಪೂರ್ಣವಾಗಿ ಸುಲಭವಾಗಿ ಹೇಗೆ ದಾಟಿಯೇನೋ ಅದನ್ನು ನನಗೆ ತಿಳಿಯಹೇಳಬೇಕು.

## ಶ್ರೀರಾಮರ ಉತ್ತರ

**ಶ್ರುತ್ವಾಥ ಸೌಮಿತ್ರಿವಚೋಽಖಿಲಂ ತದಾ**
**ಪ್ರಾಹ ಪ್ರಪನ್ನಾರ್ತಿಹರಃ ಪ್ರಸನ್ನಧೀಃ ।**
**ವಿಜ್ಞಾನಮಜ್ಞಾನತಮೋಪಶಾನ್ತಯೇ[1]**
**ಶ್ರುತಿಪ್ರಪನ್ನಂ ಕ್ಷಿತಿಪಾಲಭೂಷಣಃ ॥ ೬ ॥**

೬. ಆಗ ಇಂತೆಂದ ಸೌಮಿತ್ರಿಯ ವಚನವೆಲ್ಲವನ್ನೂ ಕೇಳಿದ ಭೂಮಿಪರ ಭೂಷಣನಾದ ರಾಮನು ಶರಣುಹೊಕ್ಕವರ ಸಂಕಟವನ್ನು ತೊಲಗಿಸುವವನಾದ್ದರಿಂದ ಪ್ರಸನ್ನಚಿತ್ತದಿಂದ ಅಜ್ಞಾನವೆಂಬ ಕತ್ತಲೆಯ ನಾಶಕ್ಕಾಗಿ ಶ್ರುತಿಯಲ್ಲಿ ಉಕ್ತವಾಗಿರುವ ವಿಜ್ಞಾನವನ್ನು ಹೇಳಿದನು.

## ಅಧಿಕಾರವಿಚಾರ

**ಆದೌ ಸ್ವವರ್ಣಾಶ್ರಮವರ್ಣಿತಾಃ ಕ್ರಿಯಾಃ**
**ಕೃತ್ವಾ ಸಮಾಸಾದಿತಶುದ್ಧಮಾನಸಃ ।**
**ಸಮಾಪ್ಯ ತತ್ಪೂರ್ವಮುಪಾತ್ತಸಾಧನಃ**
**ಸಮಾಶ್ರಯೇತ್ ಸದ್ಗುರುಮಾತ್ಮಲಬ್ಧಯೇ ॥ ೭ ॥**

೭. ಮೊದಲು ತನ್ನ ವರ್ಣಕ್ಕೂ ಆಶ್ರಮಕ್ಕೂ ಶಾಸ್ತ್ರದಲ್ಲಿ ಹೇಳಿರುವ ಕರ್ಮಗಳನ್ನು ಮಾಡಿ ಚಿತ್ತಶುದ್ಧಿಯನ್ನು ಪಡೆದುಕೊಂಡು ಅವುಗಳ ಅನುಷ್ಠಾನವನ್ನು ಮುಗಿಸಿ ಮೊದಲು ಸಾಧನಗಳನ್ನಳವಡಿಸಿಕೊಂಡು ಆತ್ಮಪ್ರಾಪ್ತಿಗಾಗಿ ಸದ್ಗುರುವನ್ನು ಆಶ್ರಯಿಸಬೇಕು.

ಟಿಪ್ಪಣಿ : ಇಲ್ಲಿ ಸಾಧನಗಳೆಂದರೆ ವಿವೇಕ, ವೈರಾಗ್ಯ, ಶಮಾದಿಗಳು, ಮುಮುಕ್ಷುತೆ-ಎಂಬ ನಾಲ್ಕು.

**ಕ್ರಿಯಾ ಶರೀರೋದ್ಭವಹೇತುರಾದೃತಾ**
**ಪ್ರಿಯಾಪ್ರಿಯೇ ವೈ[2] ಭವತಃ ಸುರಾಗಿಣಃ ।**

---

1. 'ತಮಃ ಪ್ರಶಾನ್ತಯೇ' ಗೋ ॥

2. 'ಪ್ರಿಯಾಪ್ರಿಯೌ ತೌ' ಎಂಬ ಪಾಠಾಂತರಕ್ಕಿಂತ ಇದು ಉತ್ತಮವೆಂದು ತೋರುತ್ತದೆ.

**ಧರ್ಮೇತರೌ ತತ್ರ ಪುನಃ ಶರೀರಕಂ[1]**
**ಪುನಃ ಕ್ರಿಯಾ ಚಕ್ರವದೀರ್ಯತೇ ಭವಃ ॥ ೮ ॥**

೮. ಕರ್ಮವು ಶರೀರವುಂಟಾಗುವದಕ್ಕೆ ಕಾರಣವೆಂದು ತಿಳಿದವರು ಹೇಳುತ್ತಾರೆ. ದೇಹದಲ್ಲಿ ಅನುರಾಗವುಳ್ಳವನಿಗೆ ಪ್ರಿಯಾಪ್ರಿಯಗಳು ಆಗಿಯೇ ತೀರುತ್ತವೆ. ಅವುಗಳಿಂದಾಗಿ ಧರ್ಮ, ಅಧರ್ಮ- ಇವುಗಳು ಉಂಟಾಗುವವು; ಮತ್ತೆ ಶರೀರವುಂಟಾಗುತ್ತದೆ, ಮತ್ತೆ ಕರ್ಮವನ್ನು ಮಾಡುತ್ತಾನೆ- ಹೀಗೆ ಸಂಸಾರವು ಚಕ್ರದಂತೆ ತಿರುಗುತ್ತಿರುವದು.

ಟಿಪ್ಪಣಿ: ಕರ್ಮದ ಫಲವನ್ನನುಭವಿಸುವದಕ್ಕೆ ಶರೀರಧಾರಣೆ ಮಾಡುತ್ತಾನೆ. ಶರೀರದಲ್ಲಿ ಅಭಿಮಾನವಿರುವವನಿಗೆ ವಿಷಯಗಳಲ್ಲಿ ಪ್ರಿಯಾಪ್ರಿಯಬುದ್ಧಿಯುಂಟಾಗುವದು ತಪ್ಪದೆಂದು ಶ್ರುತಿಯಲ್ಲಿದೆ. ಪ್ರಿಯವನ್ನು ಪಡೆಯುವದಕ್ಕೂ ಅಪ್ರಿಯವನ್ನು ತೊಲಗಿಸಿಕೊಳ್ಳುವದಕ್ಕೂ ಕರ್ಮವನ್ನು ಮಾಡಿ ಪುಣ್ಯಪಾಪಗಳನ್ನು ಗಳಿಸಿಕೊಳ್ಳಬೇಕಾಗುತ್ತದೆ. ಅವುಗಳ ಫಲಭೋಗಕ್ಕಾಗಿ ಮತ್ತೆ ಶರೀರ, ಪ್ರಿಯಾಪ್ರಿಯ, ಧರ್ಮಾಧರ್ಮ- ಹೀಗೆ ತೊಳಲುತ್ತಿರುವದೇ ಸಂಸಾರವು. ಈ ಶ್ಲೋಕದಿಂದ ಹಿಡಿದು ೨೩ನೆಯ ಶ್ಲೋಕದವರೆಗಿನ ಅಭಿಪ್ರಾಯವು ಉಪದೇಶಸಾಹಸೀ ಪದ್ಯಭಾಗದಲ್ಲಿ ಕಾಣುತ್ತದೆ. ಪೀಠಿಕೆಯನ್ನು ನೋಡಿರಿ.

**ಅಜ್ಞಾನಮೇವಾಸ್ಯ ಹಿ ಮೂಲಕಾರಣಂ**
**ತದ್ಧಾನಮೇವಾತ್ರ ವಿಧೌ ವಿಧೀಯತೇ ।**
**ವಿದ್ಯೈವ ತನ್ನಾಶವಿಧೌ ಪಟೀಯಸೀ**
**ನ ಕರ್ಮ ತಜ್ಜಂ ಸವಿರೋಧಮೀರಿತಮ್[2] ॥ ೯ ॥**

೯. ಈ ಸಂಸಾರಕ್ಕೆ ಅಜ್ಞಾನವೇ ಮೂಲಕಾರಣವು. ಆದ್ದರಿಂದ ಅದರ ನಾಶವನ್ನೇ ಈ ಶಾಸ್ತ್ರದಲ್ಲಿ ಹೇಳಲಾಗಿದೆ. ಅದನ್ನು ನಾಶಗೊಳಿಸುವರೀತಿಗೆ ವಿದ್ಯೆಯೇ ಶಕ್ತಿಯುಳ್ಳದ್ದೇ ಹೊರತು ಆ ಅಜ್ಞಾನದಿಂದುಂಟಾಗಿರುವ ಕರ್ಮವು ಅವಿದ್ಯೆಗೆ ವಿರುದ್ಧವೆಂದು ಹೇಳಲ್ಪಟ್ಟಿಲ್ಲ.

---

1. 'ಶರೀರಗಮ್' ಎಂಬ ಪಾಠಾಂತರಕ್ಕಿಂತ ಇದು ಮೇಲು.
2. ಈ ಮಾತಿನ ಅರ್ಥವನ್ನು ಸಂದರ್ಭದಿಂದ ಊಹಿಸಬೇಕಾಗಿದೆ.

**ನಾಜ್ಞಾನಹಾನಿರ್ನ ಚ ರಾಗಸಙ್ಕ್ಷಯೋ**
**ಭವೇತ್ ತತಃ ಕರ್ಮ ಸದೋಷಮುದ್ಭವೇತ್ ।**
**ತತಃ ಪುನಃ ಸಂಸೃತಿರಪ್ಯವಾರಿತಾ**
**ತಸ್ಮಾದ್ಬುಧೋ ಜ್ಞಾನವಿಚಾರವಾನ್ ಭವೇತ್ ॥ ೧೦ ॥**

೧೦. (ಕರ್ಮದಿಂದ) ಅಜ್ಞಾನಹಾನಿಯಾಗುವದಿಲ್ಲ. ರಾಗವು ನಾಶವಾಗುವದೂ ಇಲ್ಲ; ಆ (ರಾಗದಿಂದ) ದೋಷದಿಂದೊಡಗೂಡಿದ ಕರ್ಮವು ಉಂಟಾಗುತ್ತದೆ, ಬಳಿಕ ಸಂಸಾರವೂ ತಪ್ಪದೆ ಉಂಟಾಗುತ್ತದೆ. ಆದ್ದರಿಂದ ವಿವೇಕಿಯಾದವನು ಜ್ಞಾನಕ್ಕಾಗಿ ವಿಚಾರವನ್ನು ಮಾಡಬೇಕು.

## ಸಮುಚ್ಚಯವಾದಿಗಳ ಪೂರ್ವಪಕ್ಷ

**ನನು ಕ್ರಿಯಾ ವೇದಮುಖೇನ ಚೋದಿತಾ**
**ಯಥೈವ ವಿದ್ಯಾ ಪುರುಷಾರ್ಥಸಾಧನಮ್ ।**
**ಕರ್ತವ್ಯತಾ ಪ್ರಾಣಭೃತಃ ಪ್ರಚೋದಿತಾ**
**ವಿದ್ಯಾಸಹಾಯತ್ವಮುಪೈತಿ ಸಾ ಪುನಃ ॥ ೧೧ ॥**

೧೧. ಕರ್ಮವು ವೇದಮೂಲಕವಾಗಿ ವಿಹಿತವಾಗಿರುವದರಿಂದ ಜ್ಞಾನದಂತೆಯೇ ಪುರುಷಾರ್ಥಕ್ಕೆ ಸಾಧನವಲ್ಲವೆ ? ಜೀವನು ಅವಶ್ಯವಾಗಿ ಮಾಡಬೇಕೆಂದು (ಕರ್ಮವನ್ನು) ವಿಧಿಸಲಾಗಿದೆ ; ಆದ್ದರಿಂದ ಅದೂ ವಿದ್ಯೆಗೆ ಸಹಾಯವಾಗುತ್ತದೆ.

**ಕರ್ಮಾಕೃತೌ ದೋಷಮಪಿ ಶ್ರುತಿರ್ಜಗೌ**
**ತಸ್ಮಾತ್ ಸದಾ ಕಾರ್ಯಮಿದಂ ಮುಮುಕ್ಷುಣಾ ।**

೧೧½. ಕರ್ಮವನ್ನು ಮಾಡದೆ ಇದ್ದರೆ ದೋಷವುಂಟೆಂದೂ ಶ್ರುತಿಯಲ್ಲಿ[1] ಹೇಳಿರುತ್ತದೆ. ಆದ್ದರಿಂದ ಇದನ್ನು ಮುಮುಕ್ಷುವಾದವನು ಯಾವಾಗಲೂ ಮಾಡಬೇಕು.

1. ಇಲ್ಲಿ ಯಾವ ಶ್ರುತಿಯನ್ನು ಪರಾಮರ್ಶೆಮಾಡಿರುತ್ತವೆಯೋ ತಿಳಿಯದು. ಸ್ಮೃತಿರ್ಜಗೌ- ಎಂಬ ಪಾಠವಿದ್ದರೆ "ಅಕುರ್ವನ್ ವಿಹಿತಂ ಕರ್ಮ ನಿಂದಿತಂ ಚ ಸಮಾಚರನ್ । ಪ್ರಸಜ್ಜಂಶ್ಚೇಂದ್ರಿಯಾರ್ಥೇಷು ನರಃ ಪತನಮೃಚ್ಛತಿ ॥" ಎಂಬ ಮನುಸ್ಮೃತಿಯನ್ನು ಇಲ್ಲಿ ಸೂಚಿಸಿದೆ ಎಂದು ತಿಳಿಯಬೇಕು.

ಟಿಪ್ಪಣಿ : ಜ್ಞಾನವನ್ನು ಹೇಗೆ ಶಾಸ್ತ್ರದಲ್ಲಿ ಹೇಳಿದೆಯೋ ಹಾಗೆಯೇ ಕರ್ಮವನ್ನೂ ವಿಧಿಸಿದೆ; ಆದ್ದರಿಂದ ಅದೂ ಪುರುಷಾರ್ಥಸಾಧನವಾಗಿರುತ್ತದೆ. ಬದುಕಿರುವವರೆಗೂ ಕರ್ಮವನ್ನು ಮಾಡಬೇಕೆಂದು ಶಾಸ್ತ್ರವಿದೆ. ಕರ್ಮವನ್ನು ಬಿಟ್ಟರೆ ದೋಷವನ್ನೂ ಶಾಸ್ತ್ರದಲ್ಲಿ ಹೇಳಿದೆ. ಆದ್ದರಿಂದ ಇದು ಜ್ಞಾನಕ್ಕೆ ಸಹಕಾರಿಸಾಧನವೆಂದು ಒಪ್ಪಬೇಕು-ಎಂಬುದು ಪೂರ್ವಪಕ್ಷಿಯ ಆಶಯವು.

**ನನು ಸ್ವತನ್ತ್ರಾ ಧ್ರುವಕಾರ್ಯಕಾರಿಣೀ**
**ವಿದ್ಯಾ ನ ಕಿಞ್ಚಿನ್ಮನಸಾಪ್ಯಪೇಕ್ಷತೇ** ॥ ೧೨॥
**ನ ಸತ್ಯಕಾರ್ಯೋಽಪಿ ಹಿ ಯದ್ವದಧ್ವರಃ**
**ಪ್ರಕಾಙ್ಕ್ಷತೇಽನ್ಯಾನಪಿ ಕಾರಕಾದಿಕಾನ್ ।**
**ತಥೈವ ವಿದ್ಯಾ ವಿಧಿತಃ ಪ್ರಕಾಶಿತೈ-**
**ರ್ವಿಶೇಷ್ಯತೇ[1] ಕರ್ಮಭಿರೇವ ಮುಕ್ತಯೇ** ॥ ೧೩ ॥

೧೨-೧೩. (ಆಕ್ಷೇಪ) : ಜ್ಞಾನವು ಸ್ವತಂತ್ರವಾಗಿ ತನ್ನ ಕಾರ್ಯವನ್ನು ಅವಶ್ಯವಾಗಿ ಮಾಡಿಯೇತೀರುವದರಿಂದ ಅದಕ್ಕೆ ಮತ್ತೊಂದು ಸಹಾಯವು ಬೇಕೆಂದು ಮನಸ್ಸಿನಲ್ಲಿ ಕೂಡ ಕಲ್ಪಿಸುವದಾಗಲಾರದಲ್ಲ!

(ಪರಿಹಾರ) : ಹಾಗಲ್ಲ. ಏಕೆಂದರೆ ಯಜ್ಞವು ತನ್ನ ಕಾರ್ಯವನ್ನು ಸತ್ಯವಾಗಿ ಕೊಟ್ಟೇತೀರುವದಾದರೂ ಬೇರೆ ಕಾರಕಗಳೇ ಮುಂತಾದವನ್ನು ಬಯಸುವಂತೆ ಜ್ಞಾನಕ್ಕೂ ಮುಕ್ತಿಯನ್ನು ಕೊಡುವದಕ್ಕೆ ವಿಧಿಯಿಂದ ತೋರಿಸಲ್ಪಟ್ಟಿರುವ ಕರ್ಮಗಳೆಂಬ ವಿಶೇಷಣವೇ ಬೇಕಾಗಿರುತ್ತದೆ.

## ಸಮುಚ್ಚಯವಾದದ ಖಂಡನೆ

**ಕೇಚಿದ್ವದನ್ತೀತಿ[2] ವಿತರ್ಕವಾದಿನ-**
**ಸ್ತದಪ್ಯಸದ್ದೃಷ್ಟವಿರೋಧಕಾರಣಾತ್ ।**
**ದೇಹಾಭಿಮಾನಾದಭಿವರ್ಧತೇ ಕ್ರಿಯಾ**
**ವಿದ್ಯಾ ಗತಾಹಙ್ಕೃತಿತಃ ಪ್ರಸಿಧ್ಯತಿ** ॥ ೧೪ ॥

1. 'ವಿಶಿಷ್ಯತೇ' ಪಾ॥
2. 'ವದನ್ತೀಹ' ಪಾ॥

೧೪. ಹೀಗೆಂದು ಕೆಲವರು ವಿತರ್ಕವನ್ನು ಹೇಳುವವರು ಇರುತ್ತಾರೆ. ಅದೂ ಸರಿಯಲ್ಲ. ಏಕೆಂದರೆ ಇವೆರಡಕ್ಕೂ ವಿರೋಧವಿದೆ ಎಂಬುದು ಪ್ರತ್ಯಕ್ಷವಾಗಿರುತ್ತದೆ. (ಹೇಗೆಂದರೆ), ಕರ್ಮವು ದೇಹದ ಅಭಿಮಾನದಿಂದ ನೆಳೆಯುತ್ತದೆ ; ಜ್ಞಾನವು ಅಹಂಕಾರವು ಹೋದವನಲ್ಲಿಯೇ ಉಂಟಾಗುತ್ತದೆ.

**ವಿಶುದ್ಧವಿಜ್ಞಾನವಿರೋಚನಾಞ್ಚಿತಾ**
**ವಿದ್ಯಾತ್ಮವೃತ್ತಿಶ್ಚರಮೇತಿ ಭಣ್ಯತೇ ।**
**ಉದೇತಿ ಕರ್ಮಾಖಿಲಕಾರಕಾದಿಭಿ-**
**ರ್ನಿಹನ್ತಿ ವಿದ್ಯಾಖಿಲಕಾರಕಾದಿಕಮ್** ॥ ೧೫ ॥

೧೫. ವಿಶುದ್ಧಚೈತನ್ಯಸೂರ್ಯನ ಪ್ರತಿಬಿಂಬವುಳ್ಳ ಆತ್ಮಾಕಾರವಾದ ಚರಮವೃತ್ತಿಯೇ ವಿದ್ಯೆಯೆಂದು ಕರೆಯಲ್ಪಡುತ್ತದೆ. ಕರ್ಮವು ಬಗೆಬಗೆಯ ಕಾರಕಾದಿಗಳೊಡನೆ ಹುಟ್ಟುತ್ತದೆ ; ಜ್ಞಾನವು ಎಲ್ಲಾ ಬಗೆಯ ಕಾರಕಾದಿಗಳನ್ನೂ ನಾಶಗೊಳಿಸುತ್ತದೆ.

ಟಿಪ್ಪಣಿ: ಕರ್ಮ, ಜ್ಞಾನ- ಇವೆರಡಕ್ಕೂ ಅತ್ಯಂತವಿರೋಧವಿರುವದರಿಂದ ಇವೆರಡೂ ಜೊತೆಯಲ್ಲಿದ್ದುಕೊಂಡು ಮೋಕ್ಷಕ್ಕೆ ಕಾರಣವಾಗಲಾರವು. ವಿರೋಧವು ಹೇಗೆಂದರೆ (೧) ಜ್ಞಾನಕ್ಕೆ ಅಹಂಕಾರವಿರಕೂಡದು, ಕರ್ಮಕ್ಕೆ ಇರಬೇಕು ; (೨) ಜ್ಞಾನವು ಕೇವಲಚೈತನ್ಯಾಕಾರವಾದ ವೃತ್ತಿಯು, ಕರ್ಮವು ಕರ್ತ್ರಾದಿಕಾರಕಗಳೊಡನೆ ಇರುವ ವೃತ್ತಿಯೊಡಗೂಡಿದೆ; (೩) ಜ್ಞಾನವು ಕಾರಕಗಳನ್ನು ನಾಶಮಾಡುತ್ತಲೇ ಹುಟ್ಟುತ್ತದೆ. ಕರ್ಮವು ಅವುಗಳನ್ನು ಇಟ್ಟುಕೊಂಡೇ ಹುಟ್ಟುತ್ತದೆ. 'ಚರಮವೃತ್ತಿ' ಎಂದರೆ ಕೊನೆಯ ವೃತ್ತಿ. ವಿದ್ಯಾರೂಪವಾದ ವೃತ್ತಿಯು ಉಂಟಾದ ಮೇಲೆ ಮತ್ತೆ ಯಾವ ಪ್ರಮಾಣವೂ ಇಲ್ಲವೆಂಬ ಅಭಿಪ್ರಾಯದಿಂದ ಇದನ್ನು ಹೀಗೆಂದು ಬರೆದಿರಬಹುದು.

**ತಸ್ಮಾತ್ ತ್ಯಜೇತ್ಕಾರ್ಯಮಶೇಷತಃ ಸುಧೀ-**
**ರ್ವಿದ್ಯಾವಿರೋಧಾನ್ನ ಸಮುಚ್ಚಯೋ ಭವೇತ್ ।**
**ಆತ್ಮಾನುಸಂಧಾನಪರಾಯಣಃ ಸದಾ**
**ನಿವೃತ್ತಸರ್ವೇನ್ದ್ರಿಯವೃತ್ತಿಗೋಚರಃ**[1] ॥ ೧೬ ॥

1. ''ನಿವೃತ್ತಸರ್ವೇನ್ದ್ರಿಯಗೋಚರಃ ಸುಧೀರಾತ್ಮಾನುಸನ್ಧಾನಪರಾಯಣೋ ಭವೇತ್'' ಪಾ॥

೧೬. ಆದ್ದರಿಂದ ವಿವೇಕಿಯಾದವನು ಕರ್ಮವೆಲ್ಲವನ್ನೂ ಬಿಟ್ಟುಬಿಡಬೇಕು. ಜ್ಞಾನಕ್ಕೆ ವಿರುದ್ಧವಾಗಿರುವದರಿಂದ ಸಮುಚ್ಚಯವಾಗಲಾರದು. ಸಕಲೇಂದ್ರಿಯಗಳ ವೃತ್ತಿಗೆ ಗೋಚರವಾಗಿರುವ ವಿಷಯಗಳನ್ನು ಬಿಟ್ಟು ಹಿಂತಿರುಗಿ ಯಾವಾಗಲೂ ಆತ್ಮನನ್ನೇ ಅನುಸಂಧಾನ ಮಾಡುತ್ತಿರಬೇಕು.

**ಯಾವಚ್ಛರೀರಾದಿಷು ಮಾಯಯಾತ್ಮಧೀ-**
**ಸ್ತಾವದ್ವಿಧೇಯೋ ವಿಧಿವಾದಕರ್ಮಣಾಮ್**[1] **।**
**ನೇತೀತಿ ವಾಕ್ಯೈರಖಿಲಂ ನಿಷಿಧ್ಯ ತ-**
**ಜ್ಜ್ಞಾತ್ವಾ ಪರಾತ್ಮಾನಮಥ ತ್ಯಜೇತ್ ಕ್ರಿಯಾಃ** ॥ ೧೭ ॥

೧೭. ಎಲ್ಲಿಯವರೆಗೆ ಶರೀರವೇ ಮುಂತಾದವುಗಳಲ್ಲಿ ಅಜ್ಞಾನದಿಂದ ನಾನೆಂಬ ಬುದ್ಧಿಯಿರುವದೋ, ಅಲ್ಲಿಯವರೆಗೆ ವಿಧಿಗಳು ಹೇಳುವ ಕರ್ಮಗಳಿಗೆ ವಿಧೇಯನಾಗಿರಬೇಕು. 'ಇದಲ್ಲ' ಎಂಬ ಶ್ರುತಿವಾಕ್ಯಗಳಿಂದ ಅದೆಲ್ಲವನ್ನೂ ನಿಷೇಧ ಮಾಡಿ ಪರಮಾತ್ಮನನ್ನು ಅರಿತುಕೊಂಡು ಬಳಿಕ ಕರ್ಮಗಳನ್ನು ಬಿಟ್ಟುಬಿಡಬೇಕು.

**ಯದಾ ಪರಾತ್ಮಾತ್ಮವಿಭೇದಭೇದಕಂ**
**ವಿಜ್ಞಾನಮಾತ್ಮನ್ಯವಭಾತಿ ಭಾಸ್ವರಮ್ ।**
**ತದೈವ ಮಾಯಾ ಪ್ರವಿಲೀಯತೇಽಞ್ಜಸಾ**
**ಸಕಾರಕಾ ಕಾರಣಮಾತ್ಮಸಂಸೃತೇಃ** ॥ ೧೮ ॥

೧೮. ಯಾವಾಗ ಪರಮಾತ್ಮನಿಗೂ ಆತ್ಮನಿಗೂ ಇರುವ ಭೇದವನ್ನು ನಾಶಗೊಳಿಸುವ ಪ್ರಕಾಶರೂಪವಾದ ಆತ್ಮಜ್ಞಾನವು ತೋರಿಕೊಳ್ಳುವದೋ ಆಗಲೇ ಆತ್ಮನ ಸಂಸಾರಕ್ಕೆ ಕಾರಣವಾಗಿರುವ ಮಾಯೆಯು ಕಾರಣಗಳೊಡನೆ ಸಂಪೂರ್ಣವಾಗಿ ನಾಶವಾಗುತ್ತದೆ.

'ಕರ್ಮಣಃ' ಪಾ॥

**ಶ್ರುತಿಪ್ರಮಾಣಾಭಿವಿನಾಶಿತಾ[1] ಚ ಸಾ**
**ಕಥಂ ಭವಿಷ್ಯತ್ಯಪಿ ಕಾರ್ಯಕಾರಿಣೀ[2]**
**ವಿಜ್ಞಾನಮಾತ್ರಾದಮಲಾದ್ ವಿಲೀಯತೇ[3]**
**ತಸ್ಮಾದವಿದ್ಯಾ ನ ಪುನರ್ಭವಿಷ್ಯತಿ ॥ ೧೯ ॥**

೧೯. ಶ್ರುತಿಪ್ರಮಾಣದಿಂದ ನಾಶವಾದ ಆ ಅವಿದ್ಯೆಯು ಮತ್ತೆ ಕಾರ್ಯಕಾರಿಯಾಗುವದು ಹೇಗೆ? ಆದ್ದರಿಂದ ಪರಿಶುದ್ಧವಾದ ಜ್ಞಾನಮಾತ್ರದಿಂದಲೇ ಅವಿದ್ಯೆಯು ನಾಶವಾಗುತ್ತದೆ, ಮತ್ತೆ ಉಂಟಾಗುವದೂ ಇಲ್ಲ.

**ಯದಿ ಸ್ಮ ನಷ್ಟಾ ನ ಪುನಃ ಪ್ರಸೂಯತೇ**
**ಕರ್ತಾಹಮಸ್ಯೇತಿ ಮತಿಃ ಕಥಂ ಭವೇತ್ ।**
**ತಸ್ಮಾತ್ ಸ್ವತನ್ತ್ರಾ ನ ಕಿಮಪ್ಯಪೇಕ್ಷತೇ**
**ವಿದ್ಯಾ ವಿಮೋಕ್ಷಾಯ ವಿಭಾತಿ ಕೇವಲಾ ॥ ೨೦ ॥**

೨೦. ಅದು ನಾಶವಾದಮೇಲೆ ಮತ್ತೆ ಹುಟ್ಟುವದಿಲ್ಲವೆಂದಾದರೆ 'ನಾನು ಈ ಕರ್ಮಕ್ಕೆ ಕರ್ತನು' ಎಂಬ ಬುದ್ಧಿಯು ಹೇಗೆ ಉಂಟಾದೀತು ? ಆದ್ದರಿಂದ ಜ್ಞಾನವು ಮುಕ್ತಿಯನ್ನು ಸ್ವತಂತ್ರವಾಗಿಯೇ ಕೊಡುತ್ತದೆಯೇ ಹೊರತು ಮತ್ತೇನನ್ನೂ ಬಯಸುವದಿಲ್ಲ. ಅದು ತಾನೊಂದೇ ಬೆಳಗುತ್ತಿರುತ್ತದೆ.

ಟಿಪ್ಪಣಿ : ಜ್ಞಾನವು ಹುಟ್ಟಿದಕೂಡಲೇ ಅಜ್ಞಾನವು ನಾಶವಾಗಿಬಿಡುತ್ತದೆ. ಪ್ರಮಾಣದಿಂದ ಬಾಧಿತವಾದ ಬಳಿಕ ಮತ್ತೆ ಅದು ತಲೆದೋರಲು ಕಾರಣವಿಲ್ಲ. ಅಜ್ಞಾನವಿಲ್ಲದೆ ಕರ್ಮವು ಉಂಟಾಗುವಹಾಗಿಲ್ಲ. ಆದ್ದರಿಂದ ಜ್ಞಾನಕ್ಕೆ ಕರ್ಮದ ಸಹಾಯವು ಬೇಕೆಂಬ ಮತವು ಸರಿಯಲ್ಲ-ಎಂದು ಭಾವ.

**ಸಾ ತೈತ್ತಿರೀಯಶ್ರುತಿರಾಹ ಸಾದರಂ**
**ನ್ಯಾಸಂ ಪ್ರಶಸ್ತಾಖಿಲಕರ್ಮಣಾಂ ಸ್ಫುಟಮ್ ।**
**ಏತಾವದಿತ್ಯಾಹ ಚ ವಾಜಿನಾಂ ಶ್ರುತಿ-**
**ರ್ಜ್ಞಾನಂ ವಿಮೋಕ್ಷಾಯ ನ ಕರ್ಮ ಸಾಧನಮ್ ॥ ೨೧ ॥**

1. 'ಪ್ರಮಾಣೈರಪಿ ನಾಶಿತಾ' ಪಾ॥ 2. 'ಅಮಲಾದ್ವಿತೀಯತಸ್ತಸ್ಮಾತ್' ಪಾ॥
3. 'ಕಾರ್ಯರೂಪಿಣೀ' ಪಾ॥

೨೧. **ತೈತ್ತಿರೀಯಶಾಖೆಯ** (ನಾರಾಯಣಪನ್ನದ) ಶ್ರುತಿಯು **'ನ್ಯಾಸ ಏವಾತ್ಯರೇಚಯತ್'** (ಕರ್ಮಸಂನ್ಯಾಸವೇ ಹೆಚ್ಚಿನ ತಪಸ್ಸು) ಎಂದು ಪ್ರಶಸ್ತವಾದ ಕರ್ಮಗಳೆಲ್ಲವನ್ನೂ ಬಿಟ್ಟು ಬಿಡಬೇಕೆಂದು ಆದರಪೂರ್ವಕವಾಗಿ ಸ್ಫುಟವಾಗಿ ಹೇಳಿರುತ್ತದೆ, ಮತ್ತು ವಾಜಸನೇಯಶಾಖೆಯ ಬೃಹದಾರಣ್ಯಕಶ್ರುತಿಯು **'ಏತಾವದರೇ ಖಲ್ವಮೃತತ್ವಮ್'** (ಎಲೆ, ಇಷ್ಟೇ ಅಮೃತತತ್ವಕ್ಕೆ ಸಾಧನವು) ಎಂದು ಜ್ಞಾನವೊಂದೇ ಮೋಕ್ಷಕ್ಕೆ ಸಾಧನವೆಂದೂ ಕರ್ಮವು ಸಾಧನವಲ್ಲವೆಂದೂ ಹೇಳಿರುತ್ತದೆ.

**ವಿದ್ಯಾಸಮೇತ್ವೇನ ತು ದರ್ಶಿತಸ್ತ್ವಯಾ**
**ಕ್ರತುರ್ನ ದೃಷ್ಟಾನ್ತ ಉದಾಹೃತಃ ಸಮಃ ।**
**ಫಲೈಃ ಪೃಥಕ್ತ್ವಾದ್ ಬಹುಕಾರಕೈಃ ಕ್ರತುಃ**
**ಸಂಸಾಧ್ಯತೇ ಜ್ಞಾನಮತೋ ವಿಪರ್ಯಯಮ್** ॥ ೨೨ ॥

೨೨. ಜ್ಞಾನಕ್ಕೆ ಸಮವೆಂದು (ಪೂರ್ವಪಕ್ಷಿಯಾದ) ನೀನು ಯಜ್ಞದ ದೃಷ್ಟಾಂತವನ್ನು ಕೊಟ್ಟಿದ್ದೆಯಷ್ಟೆ? ಆದರೆ ಅದು ಸಮವಾದ ದೃಷ್ಟಾಂತವಲ್ಲ; ಏಕೆಂದರೆ ಯಜ್ಞಕ್ಕೆ ಫಲವು ಬೇರೆಯಾಗಿ ಆಗಬೇಕಾಗಿರುತ್ತದೆ. ಆದ್ದರಿಂದ ಅದಕ್ಕೆ ಅನೇಕ ಕಾರಕಗಳು ಬೇಕು. ಆದರೆ ಜ್ಞಾನವು ಇದಕ್ಕೆ ವಿರುದ್ಧವಾಗಿರುತ್ತದೆ.

ಟಿಪ್ಪಣಿ: ಜ್ಞಾನವು ಹುಟ್ಟಿದಮೇಲೆ ಫಲವು ಕಾಲಾಂತರದಲ್ಲಿ ಆಗಬೇಕಾಗಿರುವದಿಲ್ಲ; ಜ್ಞಾನಸಮಕಾಲದಲ್ಲಿಯೇ ಅದರಿಂದ ಆಗಬೇಕಾದ ಫಲವು ಆಗಿಬಿಟ್ಟಿರುತ್ತದೆ. ಯಜ್ಞಕ್ಕೆ ಅನೇಕ ಕಾರಕಗಳು ಬೇಕಾದರೂ ಜ್ಞಾನಕ್ಕೆ ಬೇಕೆಂಬ ನಿಯಮವಿಲ್ಲ. ಎಂಬುದು ಸಿದ್ಧಾಂತಿಯ ಉತ್ತರವು. ಯಜ್ಞವು ಕಾರಕಗಳೊಡನೆ ತನ್ನ ಕಾರ್ಯವನ್ನುಂಟುಮಾಡುವದೆಂದು ಹೇಳುವ ಪೂರ್ವಪಕ್ಷವೇ ಸರಿಯಲ್ಲ ; ಏಕೆಂದರೆ ಯಜ್ಞವೇ ಕಾರಕಗಳಿಂದ ಆಗತಕ್ಕದ್ದಾಗಿದೆ. ಆದ್ದರಿಂದ ಸಮುಚ್ಚಯಕ್ಕೆ ಅದು ದೃಷ್ಟಾಂತವಾಗಲಾರದು. ಯಜ್ಞದ ಜ್ಞಾನವು ಕರ್ಮವನ್ನು ಬಯಸುವಂತೆ ಬ್ರಹ್ಮಜ್ಞಾನವೂ ಫಲವನ್ನು ಕೊಡುವದಕ್ಕೆ ಮತ್ತೊಂದನ್ನು ಬಯಸಲಿ- ಎನ್ನುವದಾದರೆ ಬ್ರಹ್ಮಜ್ಞಾನವು ತಾನು ಹುಟ್ಟಿದಕೂಡಲೆ ತನ್ನ ಕಾರ್ಯವನ್ನು ಮಾಡಿಯೇಬಿಟ್ಟಿರುವದರಿಂದ ಮತ್ತೆ ಅದಕ್ಕೆ ಆಗಬೇಕಾಗಿರುವ ಫಲವೇ ಇರುವದಿಲ್ಲ- ಎಂದು ತಿಳಿಯಬೇಕು.

**ಸಪ್ರತ್ಯವಾಯೋ ಹ್ಯಹಮಿತ್ಯನಾತ್ಮಧೀ-**
**ರಜ್ಞಪ್ರಸಿದ್ಧಾ ನ ತು ತತ್ತ್ವದರ್ಶಿನಃ ।**
**ತಸ್ಮಾದ್ಬುಧೈಸ್ತ್ಯಾಜ್ಯಮಪಿ ಕ್ರಿಯಾತ್ಮಭಿ-**
**ರ್ವಿಧಾನತಃ ಕರ್ಮ ವಿಧಿಪ್ರಕಾಶಿತಮ್ ॥ ೨೩ ॥**

೨೩. '(ಕರ್ಮವನ್ನು ಮಾಡದೆ ಇದ್ದದ್ದರಿಂದ) ಪ್ರತ್ಯವಾಯವನ್ನು ಪಡೆಯುವವನು ನಾನು' ಎಂಬ ಅನಾತ್ಮಬುದ್ಧಿಯು ಅಜ್ಞಾನಿಯಲ್ಲಿರುವದೇ ಹೊರತು ತತ್ತ್ವಜ್ಞಾನಿಗೆ ಇರುವದಿಲ್ಲ ಆದ್ದರಿಂದ ಕರ್ಮಾತ್ಮರಾದ ಅಜ್ಞರು ಕರ್ಮವನ್ನು ಮಾಡಬೇಕೆಂದು ವಿಧಿಪ್ರಕಾಶಿತವಾಗಿದ್ದರೂ ವಿವೇಕಿಗಳು ಅದನ್ನು ವಿಧಿಪೂರ್ವಕವಾಗಿ ಬಿಟ್ಟುಬಿಡಬೇಕು.

ಟಿಪ್ಪಣಿ : ಚಿತ್ತಶುದ್ಧಿಯನ್ನು ಅಥವಾ ಜ್ಞಾನವನ್ನು ಹೊಂದಿದವರು ವಿಧಿಯಲ್ಲಿ ಹೇಳಿರುವಂತೆ ಕರ್ಮಸಂನ್ಯಾಸಮಾಡಬೇಕು; ಎಂದರೆ ನಾಲ್ಕನೆಯ ಆಶ್ರಮವನ್ನು ಪಡೆಯಬೇಕು. ನಾನೆಂಬ ಅಭಿಮಾನವುಳ್ಳವರು ಮಾಡುವದಕ್ಕೆ ಕರ್ಮವು ವಿಧಿಸಿದ್ದಾದ್ದರಿಂದ ಅವರು ಮಾಡದೆ ಇದ್ದರೆ ಪ್ರತ್ಯವಾಯವಾಗುವದೇ ಹೊರತು ಜ್ಞಾನಿಗಳಿಗೆ ಆಗುವದಾಗಿಲ್ಲ- ಎಂಬುದು ಆಶಯ.

## ಮಹಾವಾಕ್ಯವಿಚಾರ

**ಶ್ರದ್ಧಾನ್ವಿತಸ್ತತ್ತ್ವಮಸೀತಿವಾಕ್ಯತೋ**
**ಗುರೋಃ ಪ್ರಸಾದಾದಪಿ ಶುದ್ಧಮಾನಸಃ ।**
**ವಿಜ್ಞಾಯ ಚೈಕಾತ್ಮ್ಯಮಥಾತ್ಮಜೀವಯೋಃ**
**ಸುಖೀ ಭವೇನ್ಮೇರುರಿವಾಪ್ರಕಮ್ಪನಃ ॥ ೨೪ ॥**

೨೪. ಶ್ರದ್ಧೆಯಿಂದ ಕೂಡಿದವನಾಗಿ 'ತತ್ತ್ವಮಸಿ' (ಅದೇ ನೀನಾಗಿರುವೆ) ಎಂಬ ವಾಕ್ಯದಿಂದಲೂ ಗುರುವಿನ ಪ್ರಸಾದದಿಂದಲೂ ಚಿತ್ತಶುದ್ಧಿಯನ್ನು ಹೊಂದಿ ಜೀವಪರಮಾತ್ಮೈಕ್ಯವನ್ನು ಅರಿತುಕೊಂಡು ಸುಖಿಯಾಗಬೇಕು; ಮೇರುಪರ್ವತದಂತೆ ಸ್ವಲ್ಪವೂ ಅಲುಗಾಡದವನಾಗಬೇಕು.

ಟಿಪ್ಪಣಿ : ಅಲುಗಾಡದವನು ಎಂದರೆ ನಿಷ್ಕರ್ಮಾತ್ಮಸ್ವರೂಪದಲ್ಲಿ ನೆಲೆನಿಂತವನು.

**ಆದೌ ಪದಾರ್ಥಾವಗತಿರ್ಹಿ ಕಾರಣಂ**
**ವಾಕ್ಯಾರ್ಥವಿಜ್ಞಾನವಿಧೌ ವಿಧಾನತಃ ।**
**ತತ್ತ್ವಂಪದಾರ್ಥೌ ಪರಮಾತ್ಮಜೀವಕಾ-**
**ವಸೀತಿ ಚೈಕಾತ್ಮ್ಯಮಥಾನಯೋರ್ಭವೇತ್ ॥ ೨೫ ॥**

೨೫. ಮೊದಲು ಪದಗಳ ಅರ್ಥವನ್ನು ತಿಳಿದುಕೊಳ್ಳುವದೇ ವಾಕ್ಯಾರ್ಥವನ್ನು ತಿಳಿದುಕೊಳ್ಳುವದಕ್ಕೆ ಕ್ರಮವಾದ ಮಾರ್ಗವೆಂಬುದು ನಿಯಮವಷ್ಟೆ? 'ತತ್ ತ್ವಮ್'- ಈ ಎರಡು ಪದಗಳ ಅರ್ಥಗಳೇ ಪರಮಾತ್ಮಜೀವರು. 'ಅಸಿ' ಎಂಬುದರರ್ಥವೇ ಈ ಇಬ್ಬರ ಐಕಾತ್ಮ್ಯವಾಗಿರುತ್ತದೆ.

**ಪ್ರತ್ಯಕ್ಪರೋಕ್ಷಾದಿವಿರೋಧಮಾತ್ಮನೋ-**
**ರ್ವಿಹಾಯ ಸಙ್ಗೃಹ್ಯ ತಯೋಶ್ಚಿದಾತ್ಮತಾಮ್ ।**
**ಸಂಶೋಧಿತಾಂ ಲಕ್ಷಣಯಾ ಚ ಲಕ್ಷಿತಾಂ**
**ಜ್ಞಾತ್ವಾ ಸ್ವಮಾತ್ಮಾನಮಥಾದ್ವಯೋ ಭವೇತ್ ॥ ೨೬ ॥**

೨೬. ಆ ಇಬ್ಬರು ಆತ್ಮರುಗಳಿಗೆ ಇರುವ- ಒಳಗಿರುವದು, ಪರೋಕ್ಷವಾಗಿರುವದು- ಎಂಬಿದೇ ಮುಂತಾದ ವಿರೋಧವನ್ನು ಬಿಟ್ಟು, ಸಂಶೋಧನೆಮಾಡಿ ಚೆನ್ನಾಗಿ ಗ್ರಹಿಸಿ ಲಕ್ಷಣೆಯಿಂದ ಲಕ್ಷಿತವಾದ ಅವರಿಬ್ಬರ ಚಿದಾತ್ಮ ಸ್ವರೂಪವನ್ನು ತನ್ನ ಆತ್ಮನೆಂದು ಅರಿತುಕೊಂಡು ಆ ಬಳಿಕ ಅದ್ವಯನಾಗಬೇಕು.

**ಏಕಾತ್ಮಕತ್ವಾಜ್ಜಹತೀ ನ ಸಂಭವೇತ್**
**ತಥಾಽಜಹಲ್ಲಕ್ಷಣತಾ ವಿರೋಧತಃ ।**
**ಸೋಽಯಂ ಪದಾರ್ಥಾವಿವ ಭಾಗಲಕ್ಷಣಾ**
**ಯುಜ್ಯೇತ ತತ್ತ್ವಂ ಪದಯೋರದೋಷತಃ ॥ ೨೭ ॥**

೨೭. ಇಲ್ಲಿ ಐಕಾತ್ಮ್ಯವೇ ಇರುವದರಿಂದ ಜಹಲ್ಲಕ್ಷಣೆಯು ಹೊಂದುವದಿಲ್ಲ, ಇದರಂತೆ ಅಜಹಲ್ಲಕ್ಷಣೆಯಾದರೂ ಹೊಂದುವದಿಲ್ಲ; ಏಕೆಂದರೆ ಆಗ ವಿರೋಧವೇ ಆಗುತ್ತದೆ. (ಅವನೇ ಇವನು ಎಂಬಲ್ಲಿ) ಅವನು, ಇವನು ಎಂಬ ಪದಗಳಿಗೆ ಭಾಗಲಕ್ಷಣೆಯಿಂದ ಅರ್ಥವನ್ನು ತೆಗೆದುಕೊಳ್ಳುವಂತೆ ತತ್, ತ್ವಮ್ - ಎಂಬ ಪದಗಳಿಗೆ ಭಾಗಲಕ್ಷಣೆಯನ್ನು ತೆಗೆದುಕೊಂಡರೆ ಸರಿಹೋಗುತ್ತದೆ. ಏಕೆಂದರೆ ಇಲ್ಲಿ ಯಾವ ದೋಷವೂ ಇರುವದಿಲ್ಲ.

ಟಿಪ್ಪಣಿ : ಗಂಗೆಯಲ್ಲಿ ಹಳ್ಳಿ ಇದೆ- ಎಂಬ ವಾಕ್ಯದಲ್ಲಿ ಗಂಗೆ ಎಂಬ ಶಬ್ದಕ್ಕೆ ನದಿಯೆಂಬ ವಾಚ್ಯಾರ್ಥವನ್ನು ಬಿಟ್ಟು ಗಂಗಾತೀರವೆಂಬ ಲಕ್ಷ್ಯಾರ್ಥವನ್ನು ತೆಗೆದುಕೊಳ್ಳುತ್ತೇವಷ್ಟೆ? ಅದಕ್ಕೆ ಜಹಲ್ಲಕ್ಷಣೆ ಎಂದು ಹೆಸರು. ಅದರಂತೆ ಇಲ್ಲಿ ತತ್, ತ್ವಮ್ - ಎಂಬ ಶಬ್ದಗಳಿಗೆ ವಾಚ್ಯಾರ್ಥವನ್ನು ಬಿಟ್ಟು ಅದಕ್ಕೆ ಸಂಬಂಧಪಟ್ಟ ಮತ್ತೊಂದು ಅರ್ಥವನ್ನು ತೆಗೆದುಕೊಳ್ಳುವದಕ್ಕೆ ಬರುವದಿಲ್ಲ. ಏಕೆದಂರೆ ಆತ್ಮನು ಒಬ್ಬನೇ ಇರುತ್ತಾನಾದ್ದರಿಂದ ಅವನಿಗಿಂತ ಬೇರೆಯಾದ ತತ್ಸಂಬಂಧಿಯಾದ ಬೇರೊಂದು ಅರ್ಥವೇ ಇಲ್ಲ. 'ಹುಲ್ಲು ಬರುತ್ತಿದೆ' ಎಂಬ ವಾಕ್ಯದಲ್ಲಿ ಹುಲ್ಲನ್ನು ಹೊತ್ತವನು ಬರುತ್ತಿದಾನೆ ಎಂಬರ್ಥವನ್ನು ತೆಗೆದುಕೊಳ್ಳುತ್ತೇವಷ್ಟೆ? ಇಲ್ಲಿ ಹುಲ್ಲನ್ನು ಬಿಡದೆ ಹುಲ್ಲನ್ನು ಹೊತ್ತಿರುವವನನ್ನೂ ಗ್ರಹಿಸುತ್ತೇವಾದ್ದರಿಂದ ಅದು ಅಜಹಲ್ಲಕ್ಷಣೆಯಾಯಿತು. ಆದರೆ ಇಲ್ಲಿ ತತ್, ತ್ವಮ್ - ಎಂಬ ಮಾತುಗಳ ಅರ್ಥವನ್ನು ಬಿಡದೆ ಇದ್ದರೆ ಅದೇ ನೀನು ಎಂಬ ವಾಕ್ಯವು ವಿರುದ್ಧಾರ್ಥವೇ ಆಗುತ್ತದೆ ; ಏಕೆಂದರೆ 'ಜಗತ್ಸ್ರಷ್ಟೃವಾದ ಬ್ರಹ್ಮವು ಸಂಸಾರಿಯಾದ ನೀನು' ಎಂಬುದು ವಿರುದ್ಧವು. ಆದ್ದರಿಂದ 'ಅವನೇ ಇವನು' ಎಂಬಲ್ಲಿ ಕಾಲದೇಶಾದಿಗಳು ಬೇರೆಯಿಗರುವವೆಂಬ ವಿರುದ್ಧಾಂಶವನ್ನು ಬಿಟ್ಟು ವ್ಯಕ್ತಿಯು ಒಬ್ಬನೇ ಎಂಬುದನ್ನು ಹೇಗೆ ಗ್ರಹಿಸುವೆವೋ ಹಾಗೆ ಇಲ್ಲಿಯೂ ವಿರುದ್ಧವಾದ ಅಂಶಗಳನ್ನು ಬಿಟ್ಟು ಚಿನ್ಮಾತ್ರವನ್ನು ಗ್ರಹಿಸಬೇಕು; ಇದಕ್ಕೆ ಭಾಗವತ್ಯಾಗಲಕ್ಷಣೆಯೆಂದು ಹೆಸರು. ಇದನ್ನೇ ಇಲ್ಲಿ ಸ್ವೀಕರಿಸಬೇಕು. ಹೇಗೆಂದರೆ ಅದು ಎಂದರೆ ಜಗತ್ಕಾರಣವಾದ ಬ್ರಹ್ಮವು ; ನೀನು ಎಂದರೆ ಎದುರಿಗಿರುವ ಸಂಸಾರಿಯಾದ ನೀನು' ಎಂಬುದು ವಿರುದ್ಧವು. ಆದ್ದರಿಂದ 'ಅವನೇ ಇವನು' ಎಂಬಲ್ಲಿ ಕಾಲದೇಶಾದಿಗಳು ಬೇರೆಯಾಗಿರುವವೆಂಬ ವಿರುದ್ಧಾಂಶವನ್ನು ಬಿಟ್ಟು ವ್ಯಕ್ತಿಯು ಒಬ್ಬನೇ ಎಂಬುದನ್ನು ಹೇಗೆ ಗ್ರಹಿಸುವೆವೋ ಹಾಗೆ ಇಲ್ಲಿಯೂ ವಿರುದ್ಧವಾದ ಅಂಶಗಳನ್ನು ಬಿಟ್ಟು ಚಿನ್ಮಾತ್ರವನ್ನು ಗ್ರಹಿಸಬೇಕು; ಇದಕ್ಕೆ ಭಾಗತ್ಯಾಗಲಕ್ಷಣೆಯೆಂದು ಹೆಸರು. ಇದನ್ನೇ ಇಲ್ಲಿ ಸ್ವೀಕರಿಸಬೇಕು. ಹೇಗೆಂದರೆ ಅದು ಎಂದರೆ ಜಗತ್ಕಾರಣವಾದ ಬ್ರಹ್ಮವು; ನೀನು ಎಂದರೆ ಎದುರಿಗಿರುವ ಸಂಸಾರಿಯಾದ ಜೀವನು. ಪ್ರತ್ಯಕ್ಷತ್ವ, ಪರೋಕ್ಷತ್ವ; ಅಸಂಸಾರಿತ್ವ, ಸಂಸಾರಿತ್ವ- ಮುಂತಾದ ವಿರುದ್ಧಧರ್ಮಗಳನ್ನು ಬಿಟ್ಟು ನಿತ್ಯಶುದ್ಧಬುದ್ಧಮುಕ್ತಸ್ವಭಾವವಾದ ಬ್ರಹ್ಮವು ಎಂಬ ಒಂದೇ ಅರ್ಥವನ್ನು ಸ್ವೀಕರಿಸಿದರೆ ವಾಕ್ಯಾರ್ಥದಲ್ಲಿ ಯಾವ ವಿರೋಧವೂ ಇರುವದಿಲ್ಲ.

## ತ್ವಂಪದಾರ್ಥಶೋಧನೆ

**ರಸಾದಿಪಞ್ಚೀಕೃತಭೂತಸಂಭವಂ**
**ಭೋಗಾಲಯಂ ದುಃಖಸುಖಾದಿಕರ್ಮಣಾಮ್ ।**
**ಶರೀರಮಾಹುರ್ದುರಿತಾದಿ[1] ಕರ್ಮಜಂ**
**ಮಾಯಾಮಯಂ ಸ್ಥೂಲಮುಪಾಧಿಮಾತ್ಮನಃ ॥ ೨೮ ॥**

1. 'ಶರೀರಮಾದ್ಯನ್ತವದಾದಿ ಕರ್ಮಜಮ್' ಪಾ॥

೨೮. ಪೃಥ್ವಿಯೇ ಮುಂತಾದ ಪಂಚೀಕೃತಭೂತಗಳಿಂದುಂಟಾಗಿಯೂ ದುಃಖ, ಸುಖ- ಮುಂತಾದ ಕರ್ಮಫಲಗಳ ಭೋಗಕ್ಕೆ ಸ್ಥಾನವಾಗಿಯೂ ಪಾಪವೇ ಮುಂತಾದ ಕರ್ಮದಿಂದ ಹುಟ್ಟಿದ್ದಾಗಿಯೂ ಇರುವ ಮಾಯಾಮಯವಾದ ಶರೀರವನ್ನು ಆತ್ಮನಿಗೆ ಸ್ಥೂಲವಾದ ಉಪಾಧಿಯೆಂದು ಕರೆಯುತ್ತಾರೆ.

ಟಿಪ್ಪಣಿ : ಪಂಚಭೂತಗಳು ಬೇರೆಬೇರೆಯಾಗಿರುವಾಗ ಅಪಂಚೀಕೃತ ಭೂತಗಳಾಗಿರುತ್ತವೆ; ಅವು ಒಂದರಲ್ಲೊಂದು ಬೆರೆತರೆ ಪಂಚೀಕೃತ ಭೂತವಾಗುತ್ತವೆ. ಶರೀರವು ಪಂಚೀಕೃತಭೂತಗಳಿಂದಾಗಿರುತ್ತದೆಯಾದ್ದರಿಂದ ಆತ್ಮನಲ್ಲ. ಸುಖದುಃಖಗಳನ್ನು ಅನುಭವಿಸುವದಾದ್ದರಿಂದ ಅದನ್ನು ನೋಡುವ ಆತ್ಮನಲ್ಲ. ಈಗ ತೋರಿ ಆಗ ಹಾರುವ ಮಾಯಾಮಯವಾಗಿರುವದರಿಂದ ಅದು ನಿತ್ಯನಾದ ಆತ್ಮನಲ್ಲ. ಆತ್ಮನ ಜೊತೆಯಲ್ಲಿದ್ದು ಅವನನ್ನು ಗುರುತಿಸುವದಕ್ಕೆ ಬೇಕಾದ ಸುತ್ತುವಳೆಯವಾಗಿರುವದರಿಂದ ಇದು ಉಪಾಧಿಯು. ಮುಂದಿನ ಶ್ಲೋಕದಲ್ಲಿ ಹೇಳುವ ಉಪಾಧಿಯು ಕಣ್ಣಿನಿಂದ ನೋಡಿದರೆ ಇದು ಸ್ಥೂಲವಾಗಿರುತ್ತದೆ, ಎಂದರೆ ಸ್ಫುಟವಾಗಿ ಇಂದ್ರಿಯಗೋಚರವಾಗಿರುತ್ತದೆ.

**ಸೂಕ್ಷ್ಮಂ ಮನೋಬುದ್ಧಿದಶೇನ್ದ್ರಿಯೈರ್ಯುತಂ**
**ಪ್ರಾಣೈರಪಞ್ಚೀಕೃತಭೂತಸಂಭವಮ್ ।**
**ಭೋಕ್ತುಃ ಸುಖಾದೇರನು[1] ಸಾಧನಂ ಭವೇ-**
**ಚ್ಛರೀರಮನ್ಯದ್ವಿದುರಾತ್ಮನೋ ಬುಧಾಃ ॥ ೨೯ ॥**

೨೯. ಮನಸ್ಸು, ಬುದ್ಧಿ, ಹತ್ತು ಇಂದ್ರಿಯಗಳು, ಪ್ರಾಣಗಳು- ಇವುಗಳಿಂದ ಕೂಡಿದ್ದು ಅಪಂಚೀಕೃತಭೂತಗಳಿಂದುಂಟಾಗಿರುವದಾಗಿ, ಸುಖಾದಿಗಳ ಭೋಗಕ್ಕೆ ಸಾಧನವಾಗಿರುವ ಸೂಕ್ಷ್ಮಶರೀರವಿದೆಯಲ್ಲ, ಅದನ್ನು ಆತ್ಮನ ಇನ್ನೊಂದು ಶರೀರವೆಂದು ಪಂಡಿತರು ಎಣಿಸುತ್ತಾರೆ.

**ಅನಾದ್ಯನಿರ್ವಾಚ್ಯಮಪೀಹ ಕಾರಣಂ**
**ಮಾಯಾಪ್ರಧಾನಂ ತು ಪರಂ ಶರೀರಕಮ್ ।**
**ಉಪಾಧಿಭೇದಾತ್ತು ಯತಃ ಪೃಥಕ್ ಸ್ಥಿತಂ**
**ಸ್ವಾತ್ಮಾನಮಾತ್ಮನ್ಯವಧಾರಯೇತ್ ಕ್ರಮಾತ್ ॥ ೩೦ ॥**

1. 'ಸುಖಾದೇರಪಿ' ಪಾ॥

೩೦. ಅನಾದಿಯೂ ಅನಿರ್ವಾಚ್ಯವೂ ಆದ ಮಾಯೆಯು, ಪ್ರಧಾನವು, ಕಾರಣವೆಂಬ ಇನ್ನೊಂದು ಶರೀರವು. ಉಪಾಧಿವಿಶೇಷವಾದ ಅದರಿಂದ ಬೇರೆಯಾಗಿಯೇ ಇದ್ದುಕೊಂಡಿರುವ ತನ್ನ ಆತ್ಮನನ್ನು ತನ್ನಲ್ಲಿಯೇ ಕ್ರಮವಾಗಿ ನಿಶ್ಚಯಿಸಿಕೊಳ್ಳಬೇಕು.

ಟಿಪ್ಪಣಿ : ಇಲ್ಲಿ ಮಾಯೆಯನ್ನೂ ಪ್ರಧಾನವನ್ನೂ ಒಂದೆಂದು ಹೇಳಿ ಅದನ್ನೇ ಕಾರಣಶರೀರವೆಂದು ಕರೆದಿರುವದೊಂದು ವಿಶೇಷವಾಗಿದೆ. ಇರುವದೆಂದಾಗಲಿ ಇಲ್ಲವೆಂದಾಗಲಿ ಹೇಳುವದಕ್ಕೆ ಬಾರದೆ ಇರುವದರಿಂದ ಇದು ಅನಿರ್ವಾಚ್ಯವು. ಹೀಗೆ ವಿವರಿಸಿರುವದು ಶಾಂಕರಭಾಷ್ಯಪ್ರಸ್ಥಾನದಲ್ಲಿ ಕಾಣಬರುವದಿಲ್ಲವಾದರೂ ಮಾಯೆ, ಮೂಲಾವಿದ್ಯೆ- ಎಂಬ ಹೆಸರಿನಿಂದ ಕಾರಣಶರೀರವನ್ನು ಒಪ್ಪಿಕೊಂಡಿರುವ ವ್ಯಾಖ್ಯಾನಗ್ರಂಥಗಳಲ್ಲಿ ಇದು ಕಂಡುಬರುತ್ತದೆ.

**ಕೋಶೇಷು ಪಞ್ಚಸ್ವಪಿ[1] ತತ್ತದಾಕೃತಿ-**
**ರ್ವಿಭಾತಿ ಸಙ್ಗಾತ್ ಸ್ಫಟಿಕೋಪಲೋ ಯಥಾ ।**
**ಅಸಙ್ಗರೂಪೋಽಯಮಜೋ ಯತೋಽದ್ವಯೋ**
**ವಿಜ್ಞಾಯತೇಽಸ್ಮಿನ್ ಪರಿತೋ ವಿಚಾರಿತೇ[2] ॥ ೩೧ ॥**

೩೧. ಈ ಐದು ಕೋಶಗಳಲ್ಲಿಯೂ ಆಯಾ ಆಕಾರವನ್ನು ಹೊಂದುತ್ತಾ ಸ್ಫಟಿಕಶಿಲೆಯು ಉಪಾಧಿಯ ಸಂಗದಿಂದ ಆಯಾ ಬಣ್ಣದಿಂದ ಕೂಡಿ ತೋರುವಂತೆ (ಆತ್ಮನು) ತೋರುತ್ತಿರುತ್ತಾನೆ. (ಆದರೆ) ಚೆನ್ನಾಗಿ ವಿಚಾರಮಾಡಿದರೆ ಈತನು ಅಸಂಗರೂಪನೆಂದೂ ಜನ್ಮರಹಿತನೆಂದೂ ಅದ್ವಯನೆಂದೂ ತಿಳಿದುಬರುತ್ತಾನೆ.

ಟಿಪ್ಪಣಿ: ಅಜ್ಞಾನದಿಂದ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ- ಎಂಬ ಕೋಶಗಳನ್ನೇ ನಾವೆಂದು ತಪ್ಪಾಗಿ ತಿಳಿದುಕೊಂಡಿರುತ್ತೇವೆ. ನಿಜವಾಗಿ ನಮ್ಮ ಸ್ವರೂಪವು ಅಸಂಗವು, ನಿರ್ವಿಕಾರವು, ತನಗೆರಡನೆಯದಿಲ್ಲದ್ದು.

**ಬುದ್ಧೇಸ್ತ್ರಿಧಾ ವೃತ್ತಿರಪೀಹ ದೃಶ್ಯತೇ**
**ಸ್ವಪ್ನಾದಿಭೇದೇನ ಗುಣತ್ರಯಾತ್ಮನಃ ।**

1. 'ಕೋಶೇಷ್ವಯಂ ತೇಷು ತು' ಪಾ॥ 2. 'ವಿಚಾರತಃ' ಪಾ॥

**ಅನ್ಯೋನ್ಯತೋಽಸ್ಮಿನ್ ವ್ಯಭಿಚಾರತೋ ಮೃಷಾ**
**ನಿತ್ಯೇ ಪರೇ ಬ್ರಹ್ಮಣಿ ಕೇವಲೇ ಶಿವೇ ॥ ೩೨ ॥**

೩೨. (ಸತ್ತ್ವ, ರಜಸ್ತಮಗಳೆಂಬ) ಗುಣತ್ರಯರೂಪವಾದ ಅಂತಃಕರಣದ ಜಾಗ್ರತ್, ಸ್ವಪ್ನ, ಸುಷುಪ್ತಿ- ಎಂಬ ಮೂರು ಬಗೆಯ ವೃತ್ತಿಗಳೂ ಇವನಲ್ಲಿ ಕಾಣಿಸುತ್ತವೆ. ನಿತ್ಯನೂ ಅದ್ವಿತೀಯನೂ ಮಂಗಳಕರನೂ ಪರಬ್ರಹ್ಮಸ್ವರೂಪನೂ ಆದ ಈ ಆತ್ಮನಲ್ಲಿ ಇವು ಒಂದು ಇರುವಾಗ ಮತ್ತೊಂದು ತೋರದೆ ಇರುವದರಿಂದ ಇವು ಅಸತ್ಯವೇ.

**ದೇಹೇನ್ದ್ರಿಯಪ್ರಾಣಮನಶ್ಚಿದಾತ್ಮನಾಂ**
**ಸಙ್ಘಾದಜಸ್ರಂ ಪರಿವರ್ತತೇ ಧಿಯಃ ।**
**ವೃತ್ತಿಸ್ತಮೋಮೂಲತಯಾಜ್ಞಲಕ್ಷಣಾ**
**ಯಾವದ್ಭವೇತ್ ತಾವದಸೌ ಭವೋದ್ಭವಃ ॥ ೩೩ ॥**

೩೩. ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಚಿದಾತ್ಮ- ಇವುಗಳು ಒಟ್ಟುಗೂಡಿರುವದರಿಂದ ತಮೋಮೂಲವಾದ ಅಜ್ಞಾನವೆಂಬ ಅಂತಃಕರಣವೃತ್ತಿಯು ಯಾವಾಗಲೂ ಇದ್ದುಕೊಂಡೇ ಇರುವದು. ಇದು ಇರುವವರೆಗೆ ಈ ಸಂಸಾರವು ತಲೆದೋರುತ್ತಿರುವದು.

**ನೇತಿ ಪ್ರಮಾಣೇನ ನಿರಾಕೃತಾಖಿಲೋ**
**ಹೃದಾ ಸಮಾಸ್ವಾದಿತಚಿದ್ಘನಾಮೃತಃ ।**
**ತ್ಯಜೇದಶೇಷಂ ಜಗದಾತ್ತಸದ್ರಸಂ**
**ಪೀತ್ವಾ ಯಥಾಮ್ಭಃ ಪ್ರಜಹಾತಿ ತತ್ಫಲಮ್ ॥ ೩೪ ॥**

೩೪. 'ನೇತಿ' (ಇದಲ್ಲ) ಎಂಬ ಶ್ರುತಿಪ್ರಮಾಣದಿಂದ ಎಲ್ಲವನ್ನೂ ಕೈಬಿಟ್ಟು, ಮನಸ್ಸಿನಿಂದ ಚಿದ್ಘನವೆಂಬ ಅಮೃತವನ್ನು ಸವಿದು, ಒಳ್ಳೆಯ ರಸವುಳ್ಳ ಹಣ್ಣನ್ನು, ಅದರ ನೀರನ್ನು ಹೀರಿದ ಮೇಲೆ, ಬಿಸುಡುವಂತೆ, ಜಗತ್ತೆಲ್ಲವನ್ನೂ ಬಿಟ್ಟುಬಿಡಬೇಕು.

ಟಿಪ್ಪಣಿ : 'ನೇತಿ ನೇತಿ' ಎಂಬ ಶ್ರುತಿವಚನವು ಬೃಹದಾರಣ್ಯಕೋಪನಿಷತ್ತಿನಲ್ಲಿದೆ ರಸವನ್ನು ಹೀರಿಕೊಂಡ ಬಳಿಕ ಮಾವು, ಎಳನೀರು- ಮುಂತಾದವುಗಳ ನಿರುಪಯೋಗವಾದ

ಭಾಗವನ್ನು ಬಿಸುಡುವ ಹಾಗೆ ಜಗತ್ತಿನಲ್ಲಿ ಸಾರವಾದ ಆತ್ಮನನ್ನು ಸ್ವೀಕರಿಸಿ ಬಂದು ತೋರಿಕೆಯ ಭಾಗವನ್ನು ಮಿಥ್ಯೆಯೆಂದು ಬಿಟ್ಟುಬಿಡಬೇಕು.

**ಕದಾಚಿದಾತ್ಮಾ ನ ಮೃತೋ ನ ಜಾಯತೇ**
**ನ ಕ್ಷೀಯತೇ ನಾಪಿ ವಿವರ್ಧತೇಽನವಃ[1]**
**ನಿರಸ್ತಸರ್ವಾತಿಶಯಃ ಸುಖಾತ್ಮಕಃ**
**ಸ್ವಯಂಪ್ರಭಃ ಸರ್ವಗತೋಽಯಮದ್ವಯಃ ॥ ೩೫ ॥**

೩೫. ಈ ಆತ್ಮನು ಯಾವಾಗಲೂ ಸಾಯುವಿಲ್ಲ, ಯಾವಾಗಲೂ ಹುಟ್ಟುವದಿಲ್ಲ; ಇವನು ಎಂದೂ ಸವೆಯುವದಿಲ್ಲ, ಬೆಳೆಯುವದೂ ಇಲ್ಲ. ಇವನು ಹೊಸಬನಲ್ಲ, ಯಾವಾಗಲೂ ಇರುವ ಪುರಾಣಪುರುಷನು. ಯಾವದೊಂದು ವಿಶೇಷವೂ ತನ್ನಲ್ಲಿಲ್ಲದ ಆನಂದಸ್ವರೂಪನು, ಸ್ವಯಂಪ್ರಕಾಶನು, ಎಲ್ಲೆಲ್ಲಿಯೂ ವ್ಯಾಪಿಸಿರುವಾತನು, ತನಗೆರಡನೆಯುದಿಲ್ಲವನು.

ಟಿಪ್ಪಣಿ : ಆತ್ಮನಲ್ಲಿ ಯಾವ ಭಾವವಿಕಾರಗಳೂ ಇಲ್ಲ, ನಿರ್ವಿಶೇಷಸಚ್ಚಿದಾನಂದಾದ್ವಯಸ್ವರೂಪನು. ಗೀತೆ ೨-೨೦ ನೋಡಿರಿ.

**ಏವಂವಿಧೇ ಜ್ಞಾನಮಯೇ ಸುಖಾತ್ಮಕೇ**
**ಕಥಂ ಭವೋ ದುಃಖಮಯಃ ಪ್ರತೀಯತೇ ।**
**ಅಜ್ಞಾನತೋಽಧ್ಯಾಸವಶಾತ್ ಪ್ರಕಾಶತೇ**
**ಜ್ಞಾನೇ ವಿಲೀಯೇತ ವಿರೋಧತಃ ಕ್ಷಣಾತ್ ॥ ೩೬ ॥**

೩೬. ಈ ರೀತಿಯ ಚೈತನ್ಯರೂಪನಾದ ಆನಂದಸ್ವರೂಪನಾದ ಆತ್ಮನಲ್ಲಿ ದುಃಖರೂಪವಾದ ಸಂಸಾರವು ಹೇಗೆ ತೋರುತ್ತದೆ? ಅಜ್ಞಾನದಿಂದ ಅಧ್ಯಾಸದ ಬಲದಿಂದ ಇದು ತೋರುತ್ತಿರುತ್ತದೆ. ಆದರೆ ಜ್ಞಾನವುಂಟಾದರೆ ( ಜ್ಞಾನಕ್ಕೂ ಅಜ್ಞಾನಕ್ಕೂ) ವಿರೋಧವಿರುವದರಿಂದ ಒಂದು ಕ್ಷಣದಲ್ಲಿ ನಾಶವಾಗುತ್ತದೆ.

## ಪರಮಾತ್ಮನಲ್ಲಿ ಜಗತ್ತಿನ ಅಧ್ಯಾಸ

**ಯದನ್ಯದನ್ಯತ್ರ ವಿಭಾವ್ಯತೇ ಭ್ರಮಾ-**
**ದಧ್ಯಾಸಮಿತ್ಯಾಹುರಮುಂ ವಿಪಶ್ಚಿತಃ ।**

1. 'ಅಮರಃ' ಪಾ||

**ಅಸರ್ಪಭೂತೇಽಹಿವಿಭಾವನಂ[1] ಯಥಾ**
**ರಜ್ಜ್ವಾದಿಕೇ ತದ್ವದಪೀಶ್ವರೇ ಜಗತ್ ॥ ೩೭ ॥**

೩೭. ಒಂದು ಮತ್ತೊಂದರಲ್ಲಿ ಭ್ರಮೆಯಿಂದ ತೋರಿದರೆ ಅದನ್ನು ಬಲ್ಲವರು ಅಧ್ಯಾಸವೆಂದು ಕರೆಯುತ್ತಾರೆ. ಹಾವಲ್ಲದ ಹಗ್ಗವೇ ಮುಂತಾದದ್ದರಲ್ಲಿ ಹಾವು ಹೇಗೆ ತೋರುವದೋ ಅದರಂತೆಯೇ ಈಶ್ವರನಲ್ಲಿ ಜಗತ್ತು ಕಾಣುತ್ತಿರುವದು.

**ವಿಕಲ್ಪಮಾಯಾರಹಿತೇ ಚಿದಾತ್ಮಕೇ-**
**ಽಹಂಕಾರ ಏಷಃ ಪ್ರಥಮಂ ಪ್ರಕಲ್ಪಿತಃ ।**
**ಅಧ್ಯಾಸ ಏವಾತ್ಮನಿ ಸರ್ವಕಾರಣೇ**
**ನಿರಾಮಯೇ ಬ್ರಹ್ಮಣಿ ಕೇವಲೇ ಪರೇ ॥ ೩೮ ॥**

೩೮. ವಿಕಲ್ಪವಾಗಲಿ ಮಾಯೆಯಾಗಲಿ ಇಲ್ಲದ ಚಿತ್ಸ್ವರೂಪನಾದ ಸರ್ವಕಾರಣನಾದ, ನಿರ್ದೋಷನಾದ, ಅದ್ವಿತೀಯನಾದ, ಪರಬ್ರಹ್ಮಸ್ವರೂಪನಾದ ಆತ್ಮನಲ್ಲಿ ಈ ನಾನು ಎಂಬ ಅಹಂಕಾರವು ಮೊದಲು ಕಲ್ಪಿತವಾಗಿರುತ್ತದೆ. ಇದು ಅಧ್ಯಾಸವೇ.

**ಇಚ್ಛಾನುರಾಗಾದಿ[2] ಸುಖಾದಿಧರ್ಮಕಾಃ**
**ಸದಾ ಧಿಯಃ ಸಂಸೃತಿಹೇತವಃ ಪರೇ ।**
**ಯಸ್ಮಾತ್[3] ಪ್ರಸುಪ್ತೌ ತದಭಾವತಃ ಪರಃ**
**ಸುಖಸ್ವರೂಪೇಣ ವಿಭಾವ್ಯತೇ ಹಿ ನಃ[4] ॥ ೩೯ ॥**

೩೯. ಇಚ್ಛೆ, ಅನುರಾಗ ಮುಂತಾದ, ಮತ್ತು ಸುಖವೇ ಮುಂತಾದ ಅಂತಃಕರಣಧರ್ಮಗಳು ಈ ಪರಮಾತ್ಮನಲ್ಲಿ ಸಂಸಾರಕಾರಣವಾಗಿರುತ್ತವೆ. ಏಕೆಂದರೆ ಗಾಢನಿದ್ರೆಯಲ್ಲಿ ಈ ಧರ್ಮಗಳಿಲ್ಲದ್ದರಿಂದ ಸುಖಸ್ವರೂಪ ಪರಮಾತ್ಮನೇ ಆಗಿ ನಮಗೆ ತೋರುತ್ತಾನೆ.

ಟಿಪ್ಪಣಿ: ಅಹಂಕಾರವೂ ಇಚ್ಛಾದ್ವೇಷಸುಖದುಃಖಾದಿಗಳೂ ಅಂತಃಕರಣಕ್ಕೆ ಸೇರಿದ್ದರೂ ಭ್ರಾಂತಿಯಿಂದ ಅವುಗಳಲ್ಲಿ ಆತ್ಮಬುದ್ಧಿಯುಂಟಾಗಿರುವದೆಂಬುದಕ್ಕೆ ಅಂತಃಕರಣವಿಲ್ಲದ ಗಾಢನಿದ್ರೆಯಲ್ಲಿ ಅವಿಲ್ಲವೆಂಬುದೇ ಸಾಕ್ಷಿ.

1. 'ವಿಭಾಸನಮ್' ಪಾ॥ 2. 'ಇಚ್ಛಾದಿ' ಪಾ॥
3. 'ಯಥಾ' ಪಾ॥ 4. 'ವಿಭಾಸತೇ ಹಿ ಸಃ' ಪಾ॥

**ಅನಾದ್ಯವಿದ್ಯೋದ್ಭವಬುದ್ಧಿಬಿಮ್ಬಿತೋ**
**ಜೀವಃ ಪ್ರಕಾಶೋಽಯಮಿತೀರ್ಯತೇ ಚಿತಃ ।**
**ಆತ್ಮಾ ಧಿಯಃ ಸಾಕ್ಷಿತಯಾ ಪೃಥಕ್ ಸ್ಥಿತೋ**
**ಬುದ್ಧ್ಯಾ ಪರಿಚ್ಛಿನ್ನ ಇವ ಪ್ರಭಾಸತೇ[1] ॥ ೪೦ ॥**

೪೦. ಅನಾದಿಯಾದ ಅವಿದ್ಯೆಯಿಂದುಂಟಾಗಿರುವ ಅಂತಃಕರಣದಲ್ಲಿ ಪ್ರತಿಬಿಂಬಿತವಾಗಿರುವ ಈ ಚೈತನ್ಯಪ್ರಕಾಶವೇ ಜೀವನೆಂದು ಹೇಳಲ್ಪಡುತ್ತದೆ. ಆತ್ಮನು ಈ ಬುದ್ಧಿಗೆ ಸಾಕ್ಷಿಯಾಗಿ ಬೇರೆಯಿದ್ದರೂ ಅಂತಃಕರಣದಿಂದ ಪರಿಚ್ಛಿನ್ನನಾಗಿರುವಂತೆ ತೋರುತ್ತಾನೆ.

**ಚಿದ್ಬಿಮ್ಬಸಾಕ್ಷ್ಯಾತ್ಮಧಿಯಾಂ ಪ್ರಸಙ್ಗತ-**
**ಸ್ತ್ವೇಕತ್ರ ವಾಸಾದನಲಾಕ್ತಲೋಹವತ್ ।**
**ಅನ್ಯೋನ್ಯಮಧ್ಯಾಸವಶಾತ್ಪ್ರತೀಯತೇ**
**ಜಡಾಜಡತ್ವಂ ಚ ಚಿದಾತ್ಮಚೇತಸೋಃ ॥ ೪೧ ॥**

೪೧. ಚಿತ್ತಿನ ಪ್ರತಿಬಿಂಬ, ಸಾಕ್ಷಿ, ಆತ್ಮನ ಅಂತಃಕರಣ- ಇವುಗಳು ಒಂದಕ್ಕೊಂದು ಸೇರಿಕೊಂಡು ಒಂದೇ ಕಡೆಯಲ್ಲಿರುವ ಬೆಂಕಿಯಿಂದ ಕಾದ ಕಬ್ಬಿಣದಂತೆ ಒಂದರಲ್ಲಿ ಒಂದು ಅಧ್ಯಾಸವಾಗಿರುವ ಕಾರಣ ಚಿದಾತ್ಮನು ಜಡನೆಂದೂ ಅಂತಃಕರಣವು ಚಿದ್ರೂಪವೆಂದೂ ತೋರುತ್ತಿರುವದು.

ಟಿಪ್ಪಣಿ: ಈ ಅನ್ಯೋನ್ಯಾಧ್ಯಾಸವನ್ನು ವಿಂಗಡಿಸಿ ಆತ್ಮನನ್ನೂ ಅಂತಃಕರಣವನ್ನೂ ಅವು ಇರುವಂತೆ ನಿರ್ಣಯಮಾಡಿಕೊಳ್ಳುವದೇ ತತ್ತ್ವಜ್ಞಾನವು

**ಗುರೋಃ ಸಕಾಶಾದಪಿ ವೇದವಾಕ್ಯತಃ**
**ಸಂಜಾತವಿದ್ಯಾನುಭವೋ ನಿರೀಕ್ಷ್ಯ ತಮ್ ।**
**ಸ್ವಾತ್ಮಾನಮಾತ್ಮಸ್ಥಮುಪಾಧಿವರ್ಜಿತಂ**
**ತ್ಯಜೇದಶೇಷಂ ಜಡಮಾತ್ಮಗೋಚರಮ್ ॥ ೪೨ ॥**

೪೨. ಗುರುವಿನಿಂದಲೂ, ವೇದವಾಕ್ಯದಿಂದಲೂ, ಜ್ಞಾನದ ಅನುಭವವನ್ನು ಪಡೆದುಕೊಂಡು ತನ್ನ ರೂಪದಿಂದಿರುವ ಉಪಾಧಿರಹಿತನಾದ ತನ್ನ ಆತ್ಮನನ್ನು ಕಂಡುಕೊಂಡು ವಿಷಯವಾಗಿರುವ ಜಡಪ್ರಪಂಚವೆಲ್ಲವನ್ನೂ ಬಿಟ್ಟುಬಿಡಬೇಕು.

---

1. 'ಬುದ್ಧ್ಯಾ ಪರಿಚ್ಛಿನ್ನಪರಃ ಸ ಏವ ಹಿ' ಪಾ॥ ಈ ಪಾಠದಲ್ಲಿ ಅಂತಃಕರಣದಿಂದ ಪರಿಚ್ಛಿನ್ನನಾದ ಪರಮಾತ್ಮನು ಅವನೇ ಎಂದು ಕನ್ನಡಿಸಬೇಕಾಗುವದು.

## ಆತ್ಮಜ್ಞಾನಿಯ ಅನುಸಂಧಾನ

**ಪ್ರಕಾಶರೂಪೋಽಹಮಜೋಽಹಮದ್ವಯೋ-**
**ಽಸಕೃದ್ವಿಭಾತೋಽಹಮತೀವ ನಿರ್ಮಲಃ ।**
**ವಿಶುದ್ಧವಿಜ್ಞಾನಘನೋ ನಿರಾಮಯಃ**
**ಸಂಪೂರ್ಣ ಆನನ್ದಮಯೋಽಹಮಕ್ರಿಯಃ ॥ ೪೯೩ ॥**

೪೯೩. ನಾನು ಪ್ರಕಾಶರೂಪನು, ನಾನು ಜನ್ಮರಹಿತನು, ಎರಡನೆಯದಿಲ್ಲದವನು, ಯಾವಾಗಲೂ ಬೆಳಗುತ್ತಿರುವವನು, ಅತ್ಯಂತ ನಿರ್ಮಲರೂಪನು. ನಾನು ಅತ್ಯಂತ ನಿರ್ಮಲನಾದವನು ನಾನು ಅತ್ಯಂತ ಶುದ್ಧವಾದ ಚೈತನ್ಯದ ಗಟ್ಟಿಯೂ ನಿರೋಗಿಯಾದವನೂ ಎಲ್ಲ ರೀತಿ ತುಂಬಿರುವವನೂ ಆನಂದಸ್ವರೂಪನೂ ಕ್ರಿಯಾರಹಿತನೂ ಆಗಿರುತ್ತೇನೆ

**ಸದೈವ ಮುಕ್ತೋಽಹಮಚಿನ್ತ್ಯಶಕ್ತಿಮಾ-**
**ನತೀನ್ದ್ರಿಯಜ್ಞಾನಮವಿಕ್ರಿಯಾತ್ಮಕಃ ।**
**ಅನನ್ತಪಾರೋಽಹಮಹರ್ನಿಶಂ ಬುಧೈ-**
**ರ್ವಿಭಾವಿತೋಽಹಂ ಹೃದಿ ವೇದವಾದಿಭಿಃ ॥ ೪೯೪ ॥**

೪೯೪. ನಾನು ಯಾವಾಗಲೂ ಮುಕ್ತನಾಗಿರುವವನು, ಇಂಥದ್ದೆಂದು ಚಿಂತಿಸುವುದಕ್ಕಾಗದ ಶಕ್ತಿಗಳುಳ್ಳವನು. ನಾನು ಇಂದ್ರಿಯಗಳಿಗೆ ನಿಲುಕದ ಚೈತನ್ಯಸ್ವರೂಪನು. ನಿರ್ವಿಕಾರಸ್ವರೂಪನು, ಅನಂತವಾಗಿರುವ (ಸಂಸಾರದ) ಪಾರವು ನಾನು; ನಾನು ವೇದವಾಕ್ಯಗಳಿಂದ ಪಂಡಿತರು ಹಗಲೂ ಇರುಳೂ ಧ್ಯಾನಮಾಡುತ್ತಿರುವ ಸ್ವರೂಪದವನು.

**ಏವಂ ಸದಾತ್ಮಾನ[1] ಮಖಣ್ಡಿತಾತ್ಮನಾ**
**ವಿಚಾರ್ಯಮಾಣಸ್ಯ[2] ವಿಶುದ್ಧಭಾವನಾ ।**

---

1 ಪರಾತ್ಮಾನಮ್' ಪಾ.

2. 'ವಿಚಾರ್ಯಮಾಣಸ್ಯ' ಎಂಬ ಪಾಠವು ಸರಿಯಲ್ಲ, ಈಗ ಇರುವ ಪಾಠವೂ ಅಷ್ಟು ಸರಿಯಾಗಿ ತೋರುವುದಿಲ್ಲ

**ಹನ್ಯಾದವಿದ್ಯಾಮಚಿರೇಣ ಕಾರಕೈ-**
**ರಸಾಯನಂ ಯದ್ವದುಪಾಸಿತಂ ರುಜಃ ॥ ೪೫ ॥**

೪೫. ಈ ರೀತಿಯಲ್ಲಿಯಾವಾಗಲೂ ಆತ್ಮನನ್ನು ಅಖಂಡರೂಪದಿಂದ ವಿಚಾರಮಾಡುತ್ತಿರುವಾತನ ಪರಿಶುದ್ಧವಾದ ಭಾವನೆಯು ಒಂದೇ ಸಮನೆ ತೆಗೆದುಕೊಂಡ ರಸಾಯನದ ಔಷಧಿಯು ರೋಗಗಳನ್ನು ನಾಶಗೊಳಿಸುವಂತೆ ಬಲುಬೇಗನೆ ಕಾರಕಸಮೇತವಾಗಿ ಅವಿದ್ಯೆಯನ್ನು ನಾಶಗೊಳಿಸುವದು.

## ಪ್ರಪಂಚವನ್ನು ಆತ್ಮನಲ್ಲಿ ಲಯಗೊಳಿಸುವ ರೀತಿ

**ವಿವಿಕ್ತ ಆಸೀನ ಉಪಾರತೇನ್ದ್ರಿಯೋ**
**ವಿನಿರ್ಜಿತಾತ್ಮಾ ವಿಮಲಾನ್ತರಾಶಯಃ ।**
**ವಿಭಾವಯೇದೇಕಮನನ್ಯ ಸಾಧನೋ**
**ವಿಜ್ಞಾನದೃ[1] ಕ್ಕೇವಲ ಆತ್ಮಸಂಸ್ಥಿತಃ[2]। ॥ ೪೬ ॥**

೪೬. ಏಕಾಂತದಲ್ಲಿ ಕುಳಿತು, ಇಂದ್ರಿಯಗಳ ವ್ಯಾಪಾರವನ್ನು ನಿಲ್ಲಿಸಿಕೊಂಡು, ಮನಸ್ಸನ್ನು ಜಯಿಸಿ, ಹೃದಯಶುದ್ಧಿಯಿಂದೊಡಗೂಡಿ ಅದ್ವಿತೀಯನಾದ ಆತ್ಮನನ್ನು ಮಾತ್ರೆಯಾದ ಸಾಧನವನ್ನೂ ಬಿಡುಸವೆ. ವಿಜ್ಞಾನದೃಷ್ಟಿಯಿಂದ ಆತ್ಮನಲ್ಲಿಯೇ ನೆಲೆನಿಂತು ಧ್ಯಾನಮಾಡಬೇಕು.

**ವಿಶ್ವಂ ಯದೇತತ್ ಪರಮಾತ್ಮದರ್ಶನೋ**
**ವಿಲಾಪಯೇದಾತ್ಮನಿ ಸರ್ವಕಾರಣೇ ।**
**ಪೂರ್ಣಶ್ಚಿದಾನನ್ದಮಯೋಽವಶಿಷ್ಯತೇ**
**ನ ವೇದ ಬಾಹ್ಯಂ ನ ಚ ಕಿಞ್ಚಿದಾನ್ತರಮ್ ॥ ೪೭ ॥**

೪೭. ಈ ಜಗತ್ತೆಂಬುದಿದೆಯಲ್ಲ, ಇದನ್ನು ಪರಮಾತ್ಮದರ್ಶನದಿಂದ ಸರ್ವಕಾರಣನಾದ ಆತ್ಮನಲ್ಲಿಯೇ ಲಯಮಾಡಬೇಕು. ಆಗ ಪೂರ್ಣನಾದ ಚಿದಾನಂದಮಯನಾದ ಆತ್ಮನೊಬ್ಬನೇ ಉಳಿಯುತ್ತಾನೆ, ಹೊರಗಾಗಲಿ ಒಳಗಾಗಲಿ ಯಾವದನ್ನೂ ಅರಿಯದೆ ಇರುತ್ತಾನೆ.

---

1. 'ವಿಚಾರದೃಕ್' ಪಾ॥

2. 'ಕೇವಲಮಾತ್ಮಸಂಸ್ಥಿತಃ' ಪಾ॥

ಪೂರ್ವಂ ಸಮಾಧೇರಖಿಲಂ ವಿಚಿನ್ತಯೇ-
ದೋಙ್ಕಾರಮಾತ್ರಂ ಸಚರಾಚರಂ ಜಗತ್ ।
ತದೇವ ವಾಚ್ಯಂ ಪ್ರಣವೋ ಹಿ ವಾಚಕೋ
ವಿಭಾವ್ಯತೇಽಜ್ಞಾನವಶಾನ್ನ ಬೋಧತಃ ॥ ೪೮ ॥

೪೮. ಸಮಾಧಿಗೆ ಪೂರ್ವದಲ್ಲಿ ಎಲ್ಲ ಸ್ಥಾವರಜಂಗಮಗಳೊಡನೆ ಕೂಡಿದ ಜಗತ್ತನ್ನು ಓಂಕಾರಮಾತ್ರವೆಂದು ಚಿಂತಿಸಬೇಕು. ಜಗತ್ತೇ ವಾಚ್ಯವೆಂದೂ ಪ್ರಣವವೇ ವಾಚಕವೆಂದೂ ಅಜ್ಞಾನವಶದಿಂದ ತೋರುವದೇ ಹೊರತು ಜ್ಞಾನದಿಂದ ತೋರುವದಿಲ್ಲ.

ಅಕಾರಸಂಜ್ಞಃ ಪುರುಷೋ ಹಿ ವಿಶ್ವಕೋ
ಹ್ಯುಕಾರಕಸ್ತೈಜಸ ಈರ್ಯತೇ ಕ್ರಮಾತ್ ।
ಪ್ರಾಜ್ಞೋ ಮಕಾರಃ ಪರಿಪಠ್ಯತೇಽಖಿಲೈಃ
ಸಮಾಧಿಪೂರ್ವಂ ನ ತು ತತ್ತ್ವತೋ ಭವೇತ್ ॥ ೪೯ ॥

೪೯. ವಿಶ್ವನೆಂಬ ಪುರುಷನಿಗೆ ಅಕಾರವೆಂಬ ಹೆಸರು; ಬಳಿಕ ತೈಜಸನಿಗೇ ಉಕಾರನೆಂಬ ಹೆಸರು; ಪ್ರಾಜ್ಞನನ್ನು ಮಕಾರನೆಂದು ಕರೆಯುವರು. ಇದೆಲ್ಲವೂ ಸಮಾಧಿಗೆ ಪೂರ್ವದಲ್ಲಿಯೇ ಹೊರತು ನಿಜವಾಗಿ ಅಲ್ಲ.

ವಿಶ್ವಂ ತ್ವಕಾರಂ ಪುರುಷಂ ವಿಲಾಪಯೇ-
ದುಕಾರಮಧ್ಯೇ ಬಹುಧಾ ವ್ಯವಸ್ಥಿತಮ್ ।
ತತೋ ಮಕಾರೇ ಪ್ರವಿಲಾಪ್ಯ ತೈಜಸಂ
ದ್ವಿತೀಯವರ್ಣಂ ಪ್ರಣವಸ್ಯ ಚಾನ್ತಿಮೇ ॥ ೫೦ ॥
ಮಕಾರಮಪ್ಯಾತ್ಮನಿ ಚಿದ್ಘನೇ ಪರೇ
ವಿಲಾಪಯೇತ್ ಪ್ರಾಜ್ಞಮಪೀಹ ಕಾರಣಮ್ ॥ ೫೦ $_{1/2}$ ॥

೫೦-೫೦ $_{1/2}$ : ಅಕಾರಸಂಜ್ಞಕನಾದ ನಾನಾರೂಪನಾಗಿರುವ ವಿಶ್ವನೆಂಬ ಪುರುಷನನ್ನು ಉಕಾರದಲ್ಲಿ ಲಯಮಾಡಬೇಕು. ಅದರಂತೆ ಪ್ರಣವದ

ದ್ವಿತೀಯವರ್ಣವಾಗಿರುವ ಉಕಾರರೂಪತೈಜಸನನ್ನು ಕೊನೆಯ ವರ್ಣವಾದ ಮಕಾರದಲ್ಲಿ ಲಯಗೊಳಿಸಿ, ಆ ಮಕಾರವಾದ ಕಾರಣಾತ್ಮನಾದ ಪ್ರಾಜ್ಞನನ್ನು ಚಿದ್ಘನನಾದ ಪರಮಾತ್ಮನಲ್ಲಿ ವಿಲಯಮಾಡಬೇಕು.

ಟಿಪ್ಪಣಿ: ಕನಸಿಗೂ ಎಚ್ಚರಕ್ಕೂ ಭೇದವಿಲ್ಲವೆಂಬುದನ್ನು ಮನಗಂಡು ಅಕಾರವನ್ನು ಉಕಾರದಲ್ಲಿ ಲಯಮಾಡಿಕೊಳ್ಳಬೇಕು. ಆಮೇಲೆ ಸಪ್ರಪಂಚಾತ್ಮಸ್ಥಿತಿಯು ಆತ್ಮನ ಸ್ವಭಾವವಲ್ಲವೆಂಬುದನ್ನು ಸುಷುಪ್ತಿಯ ಪರೀಕ್ಷೆಯಿಂದ ಮನಗಂಡು ಇದನ್ನು ಮಕಾರದಲ್ಲಿ ಲಯಮಾಡಿಕೊಳ್ಳಬೇಕು. ಕಾರಣವಾದ ನಿಷ್ಪ್ರಪಂಚಸ್ಥಿತಿಯೂ ಸಾಪೇಕ್ಷವೆಂಬುದನ್ನು ಮನಗಂಡು ಅದನ್ನು ಶುದ್ಧಾತ್ಮನಲ್ಲಿ ಲಯಮಾಡಿಕೊಳ್ಳಬೇಕು.

**ಸೋಽಹಂ ಪರಂ ಬ್ರಹ್ಮ ಸದಾ ವಿಮುಕ್ತಮ-**
**ದ್ವಿಜ್ಞಾನದೃಙ್ ಮುಕ್ತ ಉಪಾಧಿತೋಽಮಲಃ ॥ ೫೧ ॥**
**ಏವಂ ಸದಾ ಜಾತಪರಾತ್ಮಭಾವನಃ**
**ಸ್ವಾನನ್ದತುಷ್ಟಃ ಪರಿವಿಸ್ಮೃತಾಖಿಲಃ ।**
**ಆಸ್ತೇ ಸ ನಿತ್ಯಾತ್ಮಸುಖಪ್ರಕಾಶಕಃ**
**ಸಾಕ್ಷಾದ್ವಿಮುಕ್ತೋಽಚಲವಾರಿಸಿನ್ಧುವತ್ ॥ ೫೨ ॥**

೫೧-೫೨. 'ಈ ನಾನು ನಿತ್ಯಮುಕ್ತನಾದ ಪರಬ್ರಹ್ಮವು, ವಿಜ್ಞಾನದೃಗ್ರೂಪನಾಗಿರುವೆನು, ಉಪಾಧಿರಹಿತನಾಗಿರುವೆನು, ನಿರ್ಮಲನಾಗಿರುವೆನು' ಎಂದೀಪರಿಯಲ್ಲಿ ಮುಕ್ತನು ಯಾವಾಗಲೂ ಪರಾತ್ಮಭಾವವುಂಟಾದವನಾಗಿ ಆತ್ಮಾನಂದದಿಂದ ಸಂತುಷ್ಟನಾಗಿ ಎಲ್ಲವನ್ನೂ ಮರೆತು ನಿತ್ಯಾತ್ಮಾನಂದವನ್ನು ತೋರ್ಪಡಿಸಿಕೊಳ್ಳುತ್ತಾ ಸಾಕ್ಷಾತ್ತಾಗಿ ವಿಮುಕ್ತನಾಗಿ ಅಲುಗಾಡದ ನೀರಿನ ಕಡಲಿನಂತೆ ಇರುತ್ತಾನೆ.

## ಆತ್ಮಸಮಾಧಿಯ ಫಲ

**ಏವಂ ಸದಾಭ್ಯಸ್ತಸಮಾಧಿಯೋಗಿನೋ**
**ನಿವೃತ್ತಸರ್ವೇನ್ದ್ರಿಯಗೋಚರಸ್ಯ ಹಿ ।**
**ವಿನಿರ್ಜಿತಾಶೇಷರಿಪೋರಹಂ ಸದಾ**
**ದೃಶ್ಯೋ ಭವೇಯಂ ಜಿತಷಡ್ಗುಣಾತ್ಮನಃ ॥ ೫೩ ॥**

೫೩. ಹೀಗೆ ಯಾವಾಗಲೂ ಸಮಾಧಿಯನ್ನು ಅಭ್ಯಾಸಮಾಡುವ ಯೋಗಿಗೆ, ಸಕಲ ಇಂದ್ರಿಯಾರ್ಥಗಳಿಂದಲೂ ಹಿಂಜರಿದಿರುವವನೂ ಸಕಲ ದೋಷವೈರಿಗಳನ್ನೂ ಗೆದ್ದುಕೊಂಡು ಕಾಮಕ್ರೋಧವೇ ಮುಂತಾದ ಷಡ್ವರ್ಗಗಳನ್ನು ಗೆದ್ದವನಾಗಿರುವವನೂ ಆಗಿರುವವನಿಗೆ ನಾನು ಯಾವಾಗಲೂ ದೃಶ್ಯನಾಗಿರುತ್ತೇನೆ.

**ಧ್ಯಾತ್ವೈವಮಾತ್ಮಾನಮಹರ್ನಿಶಂ ಮುನಿ-**
**ಸ್ತಿಷ್ಠೇತ್ ಸದಾ ಮುಕ್ತಸಮಸ್ತಬನ್ಧನಃ ।**
**ಪ್ರಾರಬ್ಧಮಶ್ನನ್ನಭಿಮಾನವರ್ಜಿತೋ**
**ಮಯ್ಯೇವ ಸಾಕ್ಷಾತ್ ಪ್ರವಿಲೀಯತೇ ತತಃ ॥ ೫೪ ॥**

೫೪. ಈ ರೀತಿಯಲ್ಲಿ ಹಗಲೂ ಇರುಳೂ ಆತ್ಮನನ್ನು ಚಿಂತಿಸುತ್ತಾ ಮುನಿಯಾದವನು ಯಾವಾಗಲೂ ಸರ್ವಬಂಧಗಳಿಂದಲೂ ಬಿಡುಗಡೆಯಾಗಿ ಪ್ರಾರಬ್ಧಕರ್ಮದ ಫಲವನ್ನು ಅನುಭವಿಸುತ್ತಾ ಅಹಂಕಾರವಿಲ್ಲದೆ ಇದ್ದುಕೊಂಡು, ಬಳಿಕ ನೇರಾಗಿ ನನ್ನಲ್ಲಿಯೇ ಲಯವಾಗಿಬಿಡುತ್ತಾನೆ.

ಟಿಪ್ಪಣಿ : ಜ್ಞಾನಿಯು ಮೊದಲೂ ಮುಕ್ತನೇ ಆಗಿದ್ದರೂ ದೇಹವು ಬಿದ್ದ ಬಳಿಕ ಮತ್ತ ಹುಟ್ಟುವದಿಲ್ಲವೆಂಬ ಕಾರಣದಿಂದ ಪರಮಾತ್ಮನಲ್ಲಿ ಸೇರಿಹೋದನೆಂದೂ ಮುಕ್ತನಾದನೆಂದೂ ಹೇಳುವರು.

**ಆದೌ ಚ ಮಧ್ಯೇ ಚ ತಥೈವ ಚಾನ್ತತೋ**
**ಭವಂ ವಿದಿತ್ವಾ ಭಯಶೋಕಕಾರಣಮ್ ।**
**ಹಿತ್ವಾ ಸಮಸ್ತಂ ವಿಧಿವಾದಚೋದಿತಂ**
**ಭಜೇತ್ ಸ್ವಮಾತ್ಮಾನಮಥಾಖಿಲಾತ್ಮನಾಮ್ ॥ ೫೫ ॥**

೫೫. ಮೊದಲಿನಲ್ಲಿ, ನಡುವೆ, ಹಾಗೂ ಕೊನೆಯಲ್ಲಿ ಕೂಡ ಸಂಸಾರವು ಹೆದರಿಕೆಗೂ ಶೋಕಕ್ಕೂ ಕಾರಣವಾದದ್ದೆಂದು ತಿಳಿದು, ವಿಧಿಯಿಂದಲೂ ಅರ್ಥವಾದದಿಂದಲೂ ಮಾಡಬೇಕೆಂದು ವಿಧಿಸಿರುವ ಕರ್ಮವೆಲ್ಲವನ್ನೂ ಬಿಟ್ಟು ಎಲ್ಲಾ ಜೀವರಿಗೂ ಆತ್ಮನಾದ ತನ್ನ ಆತ್ಮನನ್ನು ಭಜಿಸುತ್ತಿರಬೇಕು.

**ಆತ್ಮನ್ಯಭೇದೇನ ವಿಭಾವಯನ್ನಿದಂ**
**ಭವತ್ಯಭೇದೇನ ಮಯಾತ್ಮನಾ ತದಾ ।**

**ಯಥಾ ಜಲಂ ವಾರಿನಿಧೌ ಯಥಾ ಪಯಃ**
**ಕ್ಷೀರೇ ವಿಯದ್ವ್ಯೋಮ್ನ್ಯನಿಲೇ ಯಥಾನಿಲಃ ॥ ೫೬ ॥**

೫೬. ಈ ಜಗತ್ತೆಲ್ಲವೂ ಆತ್ಮನಿಂದ ಬೇರೆಯಲ್ಲವೆಂದು ಚಿಂತಿಸುತ್ತಿರಲು ಪರಮಾತ್ಮನಾದ ನನ್ನೊಡನೆ ನೀರು ಕಡಲಿನಲ್ಲಿಯೂ ಹಾಲು ಹಾಲಿನಲ್ಲಿಯೂ ಆಕಾಶವು ಆಕಾಶದಲ್ಲಿಯೂ ವಾಯು ವಾಯುವಿನಲ್ಲಿಯೂ ಬೆರೆತುಹೋಗುವಂತೆ ಅಭಿನ್ನನಾಗಿ ಸೇರಿಕೊಳ್ಳುತ್ತಾನೆ.

ಟಿಪ್ಪಣಿ. ಇಲ್ಲಿರುವ ದೃಷ್ಟಾಂತಕ್ಕೆ ಛಾಂದೋಗ್ಯೋಪನಿಷತ್ತಿನ ೬-೧೩ನ್ನು ನೋಡಿರಿ.

**ಇತ್ಥಂ ಯದೀಕ್ಷೇತ ಹಿ ಲೋಕಸಂಸ್ಥಿತೋ**
**ಜಗನ್ಮೃಷೈವೇತಿ ವಿಭಾವಯೇನ್ಮುನಿಃ ।**
**ನಿರಾಕೃತತ್ವಾಚ್ಛ್ರುತಿಯುಕ್ತಿಮಾನತೋ**
**ಯಥೇನ್ದುಭೇದೋ ದಿಶಿ ದಿಗ್ಭ್ರಮಾದಯಃ ॥ ೫೭ ॥**

೫೭. ಈ ರೀತಿಯಲ್ಲಿ ಲೋಕದಲ್ಲಿದ್ದುಕೊಂಡೇ ಕಾಣಬೇಕಾದರೆ ಶ್ರುತಿಯಿಂದಲೂ ಯುಕ್ತಿಯಿಂದಲೂ ಪ್ರಮಾಣದಿಂದಲೂ ನಿರಾಕರಿಸಲ್ಪಟ್ಟಿರುವದರಿಂದ ಚಂದ್ರರು ಅನೇಕರೆಂಬ ಅರಿವಿನಂತೆಯೂ ದಿಕ್ಕಿನಲ್ಲಿ ಬೇರೆ ದಿಕ್ಕೆಂಬ ಭ್ರಮೆಯೇ ಮುಂತಾದವುಗಳಂತೆಯೂ ಜಗತ್ತು ಮಿಥ್ಯೆಯೇ ಎಂದು ಚಿಂತಿಸುತ್ತಿರಬೇಕು.

ಟಿಪ್ಪಣಿ : ಶ್ರುತಿಯುಕ್ತ್ಯನುಭವಗಳಿಂದ ಜಗತ್ತು ಬೇರ್ಪಡುವ ಸ್ವರೂಪವಿಲ್ಲವೆಂದು ತೋರುವುದರಿಂದ ಮಿಥ್ಯೆಯೇ ಎಂದು ಆಲೋಚನಮಾಡುತ್ತಿರುವುದು ಆತ್ಮಸಾಕ್ಷಾತ್ಕಾರಕ್ಕೆ ಕಾರಣವೆಂದು ಭಾವ.

## ಭಕ್ತಿಯೇ ಜ್ಞಾನಕ್ಕೆ ಸಾಧನ

**ಯಾವನ್ನ ಪಶ್ಯೇದಖಿಲಂ ಮದಾತ್ಮಕಂ**
**ತಾವನ್ಮದಾರಾಧನತತ್ಪರೋ ಭವೇತ್ ।**
**ಶ್ರದ್ಧಾಲುರತ್ಯೂರ್ಜಿತಭಕ್ತಿಲಕ್ಷಣೋ**
**ಯಸ್ತಸ್ಯ ದೃಶ್ಯೋಽಹಮಹರ್ನಿಶಂ ಹೃದಿ ॥ ೫೮ ॥**

೫೮. ಎಲ್ಲಿಯವರೆಗೆ ಎಲ್ಲವೂ ನನ್ನ ಸ್ವರೂಪವೇ ಎಂಬುದನ್ನು ಕಂಡುಕೊಳ್ಳದೆ ಇರುವನೋ ಅಲ್ಲಿಯವರೆಗೆ ನನ್ನನ್ನು ತತ್ಪರನಾಗಿ ಆರಾಧನೆ ಮಾಡುತ್ತಿರಬೇಕು. ಯಾವನು ಶ್ರದ್ಧಾನ್ವಿತನಾಗಿರುವನೋ ಅತ್ಯಂತ ಹೆಚ್ಚಿನ ಭಕ್ತಿಯಿಂದ ಕೂಡಿರುವನೋ ಅವನಿಗೆ ಹಗಲೂ ಇರುಳೂ ನಾನು ಹೃದಯದಲ್ಲಿಯೇ ಗೋಚರನಾಗುವೆನು.

ಟಿಪ್ಪಣಿ : ಭಕ್ತಿಯೇ ಜ್ಞಾನಕ್ಕೆ ಮುಖ್ಯಸಾಧನವು.

## ಉಪಸಂಹಾರ

**ರಹಸ್ಯಮೇತಚ್ಛ್ರುತಿಸಾರಸಙ್ಗ್ರಹಂ**
**ಮಯಾ ವಿನಿಶ್ಚಿತ್ಯ ತವೋದಿತಂ ಪ್ರಿಯ ।**
**ಯಸ್ತ್ವೇತದಾಲೋಚಯತೀಹ ಬುದ್ಧಿಮಾನ್**
**ಸ ಮುಚ್ಯತೇ ಪಾತಕರಾಶಿಭಿಃ[1] ಕ್ಷಣಾತ್ ॥ ೫೯ ॥**

೫೯. ಈ ಶ್ರುತಿಸಾರಸಂಗ್ರಹವಾದ ರಹಸ್ಯವನ್ನು ನಾನು ನಿಶ್ಚಯಿಸಿ ಎಲೈ ಪ್ರಿಯನಾದ ಲಕ್ಷ್ಮಣನೆ, ನಿನಗಾಗಿ ಹೇಳಿರುತ್ತೇನೆ. ಯಾವ ಬುದ್ಧಿವಂತನು ಇದನ್ನು ಆಲೋಚನೆಮಾಡುತ್ತಿರುವನೋ ಅವನು ಕೂಡಲೆ ಪಾಪರಾಶಿಗಳಿಂದ ಬಿಡುಗಡೆಯನ್ನು ಹೊಂದುತ್ತಾನೆ.

**ಭ್ರಾತರ್ಯದೀದಂ ಪರಿದೃಶ್ಯತೇ ಜಗ-**
**ನ್ಮಾಯೈವ ಸರ್ವಂ ಪರಿಹೃತ್ಯ ಚೇತಸಾ ।**
**ಮದ್ಭಾವನಾಭಾವಿತಶುದ್ಧಮಾನಸಃ**
**ಸುಖೀ ಭವಾನನ್ದಮಯೋ ನಿರಾಮಯಃ ॥ ೬೦ ॥**

೬೦. ತಮ್ಮ, ಈ ತೋರುತ್ತಿರುವ ಜಗತ್ತೆಲ್ಲವೂ ಮಾಯೆಯೇ. ಇದನ್ನು ಮನಸ್ಸಿನಿಂದ ದೂರವಾಗಿಸಿ ನನ್ನ ಭಾವನೆಯನ್ನೇ ಮತ್ತೆಮತ್ತೆ ಮಾಡಿಕೊಂಡು ಮನಶ್ಶುದ್ಧಿಯನ್ನು ಪಡೆದು ಸುಖಿಯೂ ಆನಂದರೂಪನೂ ನಿರ್ದೋಷನೂ ಆಗು.

---

1. 'ಕೋಟಿಭಿಃ' ಪಾ॥

ಯಃ ಸೇವತೇ ಮಾಮಗುಣಂ ಗುಣಾತ್ ಪರಂ
ಹೃದಾ ಕದಾ ವಾ ಯದಿ ವಾ ಗುಣಾತ್ಮಕಮ್ ।
ಸೋಽಹಂ ಸ್ವಪಾದಾಞ್ಚಿತರೇಣುಭಿಃ ಸ್ಪೃಶನ್
ಪುನಾತಿ[1] ಲೋಕತ್ರಿತಯಂ ಯಥಾ ರವಿಃ ॥ ೬೧ ॥

೬೧. ಯಾವನು ಮೂರು ಗುಣಗಳನ್ನು ಮೀರಿದ ನಿರ್ಗುಣನಾದ ನನ್ನನ್ನು, ಅಥವಾ ಸಗುಣನಾದ ನನ್ನನ್ನು, ಯಾವಾಗಲಾದರೂ ಮನಸ್ಸಿನಲ್ಲಿ ಸ್ಮರಣೆಮಾಡುತ್ತಿರುವನೋ ಆತನು ನಾನೇ ಆಗಿ ತನ್ನ ಪಾದಸಂಬದ್ಧವಾದ ಧೂಳೀಕಣಗಳಿಂದ ಮುಟ್ಟಿದಮಾತ್ರದಿಂದ ಮೂರು ಲೋಕವನ್ನೂ ಸೂರ್ಯನಂತೆ ಪವಿತ್ರಗೊಳಿಸುವನು.

ಟಿಪ್ಪಣಿ : 'ಹೃದಾ ಕದಾ ವಾ' ಎಂಬುದು 'ಯದಾ ಕದಾ ವಾ' ಎಂದಿದ್ದರೆ ಯಾವಾಗ ಸ್ಮರಿಸಿದರೂ ಎಂದರ್ಥವಾಗುತ್ತದೆ. 'ಹೃದಾ ಸದಾ ವಾ' ಎಂದಿದ್ದರೆ ಯಾವಾಗಲೂ ಮನಮುಟ್ಟಿ ಸ್ಮರಿಸಿದರೆ ಎಂದರ್ಥವಾಗುತ್ತದೆ. ಯಾವಾಗಲೂ ಸ್ಮರಿಸುವವರ ಫಲವನ್ನು ಇಲ್ಲಿ ಹೇಳಿದೆ ಎಂದಿಟ್ಟುಕೊಳ್ಳುವುದೇ ಯುಕ್ತವೆಂದು ತೋರುತ್ತದೆ 'ಯಾವನು ನನ್ನನ್ನು ಸ್ಮರಿಸುವನೋ ಅವನು ನಾನು' ಎಂದದ್ದರಿಂದ ವಿಷಯವನ್ನು ಸ್ಮರಿಸುವವರು ವಿಷಯಮಯರಾಗುವಂತೆ ಭಗವಂತನನ್ನು ಸ್ಮರಿಸುವವರು ಭಗವನ್ಮಯರಾಗುತ್ತಾರೆಂಬುದನ್ನು ಸೂಚಿಸಿರುತ್ತದೆ. ಸೂರ್ಯರಶ್ಮಿಯು ಏತರಮೇಲೆ ಬಿದ್ದರೂ ಅದು ಶುಚಿಯಾಗುವಂತೆ ಆತನ ಪಾದಧೂಳಿ ಏತಕ್ಕೆ ಸೋಕುವುದೋ ಅದು ಪವಿತ್ರವಾಗುವುದೆಂದು ಹೇಳಿದ್ದರಿಂದ ಭಗವದ್ಭಕ್ತನನ್ನು ನಮಸ್ಕರಿಸುವುದರಿಂದಾಗುವ ಮಹಾಫಲವನ್ನು ಇಲ್ಲಿ ತಿಳಿಸಿದಂತಾಗುವುದಲ್ಲದೆ ಭಕ್ತಿಯ ಮಹಿಮೆಯನ್ನು ಕೊಂಡಾಡಿದಂತೆಯೂ ಆಗಿರುತ್ತದೆ.

ವಿಜ್ಞಾನಮೇತದಖಿಲಶ್ರುತಿಸಾರಮೇಕಂ[2]
ವೇದಾನ್ತವೇದ್ಯಚರಣೇನ ಮಯ್ಯೈವ ಗೀತಮಂ ।
ಯಃ ಶ್ರದ್ಧಯಾ ಪರಿಪಠೇದ್ಗುರುಭಕ್ತಿಯುಕ್ತೋ
ಮದ್ರೂಪಮೇತಿ ಯದಿ ಮದ್ವಚನೇಷು ಭಕ್ತಿಃ ॥ ೬೨ ॥

೬೨. ಈ ಸಕಲಶ್ರುತಿಸಾರವಾಗಿರುವ ಅತಿಮುಖ್ಯವಾದ ವಿಜ್ಞಾನವನ್ನು ಉಪನಿಷತ್ತುಗಳಿಂದ ಮಾತ್ರವೇ ತಿಳಿಯಬರುವ ಪಾದಗಳುಳ್ಳ ನಾನೇ ಹೇಳುತ್ತೇನೆ.

1. 'ಪುನಾಮಿ' ಪಾ॥ 2 'ಸಂಜ್ಞಮ್' ಪಾ॥

ಇದನ್ನು ಸಮಾಧಾನ [illegible] ಭಕ್ತಿ [illegible] ಶ್ರದ್ಧೆಯಿಂದ ಚೆನ್ನಾಗಿ ಪರಿಶೀಲಿಸಿ [illegible] ಮನಸ್ಸಿನಲ್ಲಿ ಪ್ರತಿಷ್ಠಿತವಾದರೆ ಅವನು ನನ್ನ ರೂಪವನ್ನೇ ಪಡೆಯುತ್ತಾನೆ.

ಟಿಪ್ಪಣಿ: [illegible] ಎಂದರೆ ಪರಮಾತ್ಮನು ಅದ್ವಿತೀಯನು, [illegible] ಅವನಲ್ಲಿಯೇ ಭಕ್ತಿಯುಳ್ಳವರಾಗಿರುವವರಿಗೆ [illegible] ಉಪನಿಷತ್ತುಗಳಲ್ಲಿ ಹೇಳಿರುವ ಮುಖ್ಯ [illegible] ಈ ಉಪದೇಶವನ್ನು ಪಡೆದು ಪರಮಾತ್ಮನಲ್ಲಿ ಭಕ್ತಿಯನ್ನು ಬೆಳೆಸಬೇಕು. ಭಕ್ತಿಯಿಂದ ಈ ಗ್ರಂಥವನ್ನು [illegible] ಗ್ರಂಥದ ಮಹಿಮೆಯನ್ನು [illegible].

**ಇತಿ ಶ್ರೀಮದಧ್ಯಾತ್ಮರಾಮಾಯಣೇ ಉಮಾಮಹೇಶ್ವರಸಂವಾದೇ**

**ಉತ್ತರಕಾಂಡೇ ಶ್ರೀರಾಮಗೀತಾ ನಾಮ ಪಞ್ಚಮಃ ಸರ್ಗಃ**

**॥ ಶ್ರೀರಾಮಾರ್ಪಣಮಸ್ತು ॥**

# ರಾಮಗೀತಾಮಾಹಾತ್ಮ್ಯ

(ಅಧ್ಯಾತ್ಮರಾಮಾಯಣಮಾಹಾತ್ಮ್ಯಸರ್ಗದಿಂದ ಆರಿಸಿದ್ದು)

**ಶ್ರೀರಾಮಗೀತಾಮಾಹಾತ್ಮ್ಯಂ ಕೃತ್ಸ್ನಂ ಜಾನಾತಿ ಶಙ್ಕರಃ ।**
**ತದರ್ಧಂ ಗಿರಿಜಾ ವೇತ್ತಿ ತದರ್ಧಂ ವೇದ್ಮ್ಯಹಂ ಮುನೇ ॥ ೪೬ ॥**

೪೬. ಬ್ರಹ್ಮನು ಹೇಳಿದನೇನೆಂದರೆ: ಎಲೈ ನಾರದಮುನಿಯೆ, ಶ್ರೀರಾಮಗೀತೆಯ ಮಾಹಾತ್ಮ್ಯವನ್ನೆಲ್ಲವನ್ನೂ ಶಿವನು ಬಲ್ಲನು, ಅದರಲ್ಲರ್ಧವನ್ನು ಪಾರ್ವತಿಯು ಬಲ್ಲಳು; ನಾನು ಅದರಲ್ಲರ್ಧವನ್ನು ಬಲ್ಲೆನು.

**ತತ್ತೇ ಕಿಞ್ಚಿತ್ ಪ್ರವಕ್ಷ್ಯಾಮಿ ಕೃತ್ಸ್ನಂ ವಕ್ತುಂ ನ ಶಕ್ಯತೇ ।**
**ಯಜ್ಜ್ಞಾತ್ವಾ ತತ್ಕ್ಷಣಾಲ್ಲೋಕಶ್ಚಿತ್ತಶುದ್ಧಿಮವಾಪ್ನುಯಾತ್ ॥ ೪೭ ॥**

೪೭. ಆದ್ದರಿಂದ ನಿನಗೆ ಸ್ವಲ್ಪಮಟ್ಟಿಗೆ ಆ ಮಾಹಾತ್ಮ್ಯವನ್ನು ಹೇಳುವೆನು; ಏಕೆಂದರೆ ಎಲ್ಲವನ್ನೂ ಹೇಳುವದು ಶಕ್ಯವಿಲ್ಲ. ಇದನ್ನು ಅರಿತುಕೊಂಡರೆ ಮನುಷ್ಯನಿಗೆ ಕೂಡಲೆ ಚಿತ್ತಶುದ್ಧಿಯುಂಟಾಗುವದು.

**ಶ್ರೀರಾಮಗೀತಾ ಯತ್ಪಾಪಂ ನ ನಾಶಯತಿ ನಾರದ ।**
**ತನ್ನ ನಶ್ಯತಿ ತೀರ್ಥಾದೌ ಲೋಕೇ ಕ್ವಾಪಿ ಕದಾಚನ ॥**
**ತನ್ನ ಪಶ್ಯಾಮ್ಯಹಂ ಲೋಕೇ ಮಾರ್ಗಮಾಣೋಽಪಿ ಸರ್ವದಾ[1] ॥೪೮॥**

೪೮. ನಾರದನೆ, ಶ್ರೀರಾಮಗೀತೆಯು ಯಾವ ಪಾಪವನ್ನು ನಾಶಮಾಡುವದಿಲ್ಲವೋ ಅದು ಲೋಕದಲ್ಲಿ ತೀರ್ಥವೇ ಮುಂತಾದ ಯಾವದರಲ್ಲಿಯೂ ನಾಶವಾಗಲಾರದು. ಎಷ್ಟು ಹುಡುಕಿದರೂ ಅಂಥ ಪಾಪವೇ ನನಗೆ ಕಾಣೆಸದು.

---

1. ಈ ಅರ್ಧವು ಇಲ್ಲಿ ಹೆಚ್ಚಾಗಿದೆ. ಕೆಲವು ಕೋಶಗಳಲ್ಲಿ :

ರಾಮಗೀತಾಮೃತರಸಃ ಪಾಪಂ ನಾಶಯತಿ ಕ್ಷಣಾತ್ ।

ತಸ್ಮಾದನ್ಯಂ ನ ಪಶ್ಯಾಮಿ ಮಾರ್ಗಮಾಣೋಽಪ್ಯಹಂ ಸದಾ ॥

(ರಾಮಗೀತಾಮೃತರಸವು ಪಾಪವನ್ನು ಕ್ಷಣದಲ್ಲಿ ನಾಶಗೊಳಿಸುತ್ತದೆ. ಅದಕ್ಕಿಂತ ಹೆಚ್ಚಾದ ಮತ್ತೊಂದನ್ನು ಹುಡುಕಿದರೂ ನನಗೆ ಕಾಣೆಸಲಿಲ್ಲ) ಎಂಬ ಶ್ಲೋಕವೊಂದು ಹೆಚ್ಚಾಗಿದೆ.

**ರಾಮೇಣೋಪನಿಷತ್ಸಿನ್ಧುಮುನ್ಮಥ್ಯೋತ್ಪಾದಿತಾಂ ಮುದಾ ।**
**ಲಕ್ಷ್ಮಣಾಯಾರ್ಪಿತಾಂ ಗೀತಾಸುಧಾಂ ಪೀತ್ವಾಮರೋ ಭವೇತ್ ॥ ೪೯॥**

೪೯. ರಾಮನು ಉಪನಿಷತ್ಸಾಗರವನ್ನು ಕಡೆದು ಸಂತೋಷದಿಂದ ಲಕ್ಷ್ಮಣನಿಗೆ ಕೊಟ್ಟಿರುವ ರಾಮಗೀತೆ ಎಂಬ ಅಮೃತವನ್ನು ಪಾನಮಾಡಿದವನು ಅಮರನಾಗುವನು.

**ಜಮದಗ್ನಿಸುತಃ ಪೂರ್ವಂ ಕಾರ್ತವೀರ್ಯವಧೇಚ್ಛಯಾ ।**
**ಧನುರ್ವಿದ್ಯಾಮಭ್ಯಸಿತುಂ ಮಹೇಶಸ್ಯಾನ್ತಿಕೇ ವಸನ್ ॥ ೫೦ ॥**
**ಅಧೀಯಮಾನಾಂ ಪಾರ್ವತ್ಯಾ ರಾಮಗೀತಾಂ ಪ್ರಯತ್ನತಃ ।**
**ಶ್ರುತ್ವಾ ಗೃಹೀತ್ವಾಶು ಪಠನ್ ನಾರಾಯಣಕಲಾಮಗಾತ್ ॥ ೫೧ ॥**

೫೦-೫೧. ಪೂರ್ವದಲ್ಲಿ ಜಮದಗ್ನಿಯ ಮಗನಾದ ಪರಶುರಾಮನು ಕಾರ್ತವೀರ್ಯನನ್ನು ಕೊಲ್ಲುವ ಇಚ್ಛೆಯಿಂದ ಧನುರ್ವಿದ್ಯೆಯ ಅಭ್ಯಾಸಕ್ಕಾಗಿ ಮಹೇಶ್ವರನ ಬಳಿಯಲ್ಲಿದ್ದನು. ಆಗ ಪಾರ್ವತಿಯು ಕಲಿಯುತ್ತಿದ್ದ ರಾಮಗೀತೆಯನ್ನು ಪ್ರಯತ್ನಪೂರ್ವಕವಾಗಿ ಶ್ರವಣಮಾಡಿ ಅದನ್ನು ಬೇಗನೆ ಗ್ರಹಿಸಿ ಪಠನಮಾಡಿದ್ದರಿಂದ ನಾರಾಯಣನ ಅಂಶವನ್ನೇ ಹೊಂದಿದನು.

**ಬ್ರಹ್ಮಹತ್ಯಾದಿಪಾಪಾನಾಂ ನಿಷ್ಕೃತಿಂ ಯದಿ ವಾಞ್ಛತಿ ।**
**ರಾಮಗೀತಾಂ ಮಾಸಮಾತ್ರಂ[1] ಪಠಿತ್ವಾ ಮುಚ್ಯತೇ ನರಃ ॥ ೫೨ ॥**

೫೨. ಬ್ರಹ್ಮಹತ್ಯೆಯೇ ಮುಂತಾದ ಪಾಪಗಳಿಗೆ ಪ್ರಾಯಶ್ಚಿತ್ತವಾಗಬೇಕೆಂದು ಬಯಸುವ ಮನುಷ್ಯನು ರಾಮಗೀತೆಯನ್ನು ಒಂದು ತಿಂಗಳವರೆಗೆ ಪಠಿಸಿದರೆ ಪಾಪಮುಕ್ತನಾಗುವನು.

**ದುಷ್ಪ್ರತಿಗ್ರಹದುರ್ಭೋಜ್ಯದುರಾಲಾಪಾದಿಸಂಭವಮ್ ।**
**ಪಾಪಂ ಯತ್ತತ್ ಕೀರ್ತನೇನ[2] ರಾಮಗೀತಾ ವಿನಾಶಯೇತ್ ॥ ೫೩ ॥**

೫೩. ದುಷ್ಟರಿಂದ ಪ್ರತಿಗ್ರಹವನ್ನು ಮಾಡಿದ್ದು, ಮಾಡಬಾರದ್ದನ್ನು ಭೋಜನ ಮಾಡಿದ್ದು, ಆಡಬಾರದ ಮಾತನ್ನು ಆಡಿದ್ದು - ಮುಂತಾದವುಗಳಿಂದುಂಟಾದ ಪಾಪವು ಯಾವದಿದ್ದರೂ ರಾಮಗೀತೆಯ ಕೀರ್ತನೆಯು ಅದನ್ನು ನಾಶಗೊಳಿಸುವದು.

1 'ರಾಮಗೀತಾಮುಚ್ಯಮಾನಾಮ್' ಪಾ॥

2 'ಪಾಪಂ ಸಕೃತ್ಕೀರ್ತನೇನ' ಪಾ॥ ಈ ಪಾಠಕ್ಕೆ ಒಂದುಸಲ ಕೀರ್ತನ ಮಾಡಿದ ಮಾತ್ರದಿಂದ ಎಂದರ್ಥ.

**ಶಾಲಗ್ರಾಮಶಿಲಾಗ್ರೇ ಚ ತುಲಸ್ಯಶ್ವತ್ಥಸನ್ನಿಧೌ ।**
**ಯತೀನಾಂ ಪುರತಸ್ತದ್ವದ್ರಾಮಗೀತಾಂ ಪಠೇತ್ತು ಯಃ ॥ ೩೪ ॥**
**ಸ ತತ್ಫಲಮವಾಪ್ನೋತಿ ಯದ್ವಾಚೋಽಪಿ ನ ಗೋಚರಮ್ ॥ ೩೪ ೧/೨ ॥**

೩೪-೩೪ ೧/೨. ಶಾಲಗ್ರಾಮಶಿಲೆಯ ಮುಂಗಡೆಯಲ್ಲಿಯೂ ತುಲಸಿಯ ಅಥವಾ ಅಶ್ವತ್ಥದ ಹತ್ತಿರವೂ ಹಾಗೂ ಯತಿಗಳ ಮುಂದೆಯೂ ರಾಮಗೀತೆಯನ್ನು ಯಾವನು ಹೇಳುವನೋ ಅವನು ಮಾತುಗಳಿಂದ ವರ್ಣಿಸುವದಕ್ಕಾಗದಂಥ ಮಹಾಫಲವನ್ನು ಪಡೆಯುವನು.

**ರಾಮಗೀತಾಂ ಪಠನ್[1] ಭಕ್ತ್ಯಾ ಯಃ ಶ್ರಾದ್ಧೇ ಭೋಜಯೇದ್ದ್ವಿಜಾನ್ ॥**
**ತಸ್ಯ ತೇ ಪಿತರಃ ಸರ್ವೇ ಯಾನ್ತಿ ವಿಷ್ಣೋಃ ಪರಂ ಪದಮ್ ॥ ೩೫ ೧/೨ ॥**

೩೫-೩೫ ೧/೨. ರಾಮಗೀತೆಯನ್ನು ಭಕ್ತಿಯಿಂದ ಪಠಿಸುತ್ತ ಯಾವನು ಶ್ರಾದ್ಧದಲ್ಲಿ ಬ್ರಾಹ್ಮಣರಿಗೆ ಭೋಜನಮಾಡಿಸುವನೋ ಅವನ ಪಿತೃಗಳೆಲ್ಲರೂ ವಿಷ್ಣುವಿನ ಪರಮಪದವನ್ನು ಹೊಂದುವರು.

**ಏಕಾದಶ್ಯಾಂ ನಿರಾಹಾರೋ ನಿಯತೋ ದ್ವಾದಶೀ ದಿನೇ ॥ ೩೬ ॥**
**ಸ್ಥಿತ್ವಾಗಸ್ತ್ಯತರೋರ್ಮೂಲೇ ರಾಮಗೀತಾಂ ಪಠೇತ್ತು ಯಃ ।**
**ಸ ಏವ ರಾಘವಃ ಸಾಕ್ಷಾತ್ ಸರ್ವದೇವೈಶ್ಚ ಪೂಜ್ಯತೇ ॥ ೩೭ ॥**

೩೬-೩೭. ಏಕಾದಶಿಯ ದಿನ ನಿಯಮದಿಂದ ಉಪವಾಸಮಾಡಿ ದ್ವಾದಶಿಯ ದಿನ ಅಗಸೆಯಮರದ ಕೆಳಗೆ ಕುಳಿತು ಯಾವನು ರಾಮಗೀತೆಯನ್ನು ಹೇಳುವನೋ ಅವನೇ ಸಾಕ್ಷಾದ್ರಾಮನು, ಅವನು ದೇವತೆಗಳೆಲ್ಲರಿಂದಲೂ ಪೂಜಿತನಾಗುವನು.

**ವಿನಾ ದಾನಂ ವಿನಾ ಧ್ಯಾನಂ ವಿನಾ ತೀರ್ಥಾವಗಾಹನಮ್।**
**ರಾಮಗೀತಾಂ ನರೋಽಧೀತ್ಯ ತದನನ್ತಫಲಂ ಲಭೇತ್ ॥ ೩೮ ॥**

೩೮. ದಾನವಿಲ್ಲದೆ, ಧ್ಯಾನವೂ ಇಲ್ಲದೆ, ತೀರ್ಥಸ್ನಾನವೂ ಇಲ್ಲದೆ ರಾಮಗೀತೆಯನ್ನು ಪಠಿಸಿದಮಾತ್ರದಿಂದಲೇ ಮನುಷ್ಯನಿಗೆ ಅನಂತಫಲವು ಲಭಿಸುವದು.

[1] 'ಪಠೇದ್ಭಕ್ತ್ಯಾ' ಪಾ॥

# ಪರಿಶಿಷ್ಟ

ಉಪದೇಶಸಾಹಸ್ರಿಯ ಸಮಾನಾರ್ಥಶ್ಲೋಕಗಳನ್ನು ರಾಮಗೀತೆಯಿಂದ [illegible] ಮೇಲುಗಡೆ ಕೊಟ್ಟಿರುವ ಸಂಖ್ಯೆಯು ರಾಮಗೀತೆಯದು, ಕೆಳಗಿನ ಸಂಖ್ಯೆಯು "ಉಪದೇಶಸಾಹಸ್ರಿ"ಯ ಗದ್ಯಪ್ರಕರಣದ್ದು [illegible]

## ರಾಮಗೀತೆ ೮

ಕರ್ಮಾಣಿ ದೇಹಯೋಗಾರ್ಥಂ ದೇಹಯೋಗೇ ಪ್ರಿಯಾಪ್ರಿಯೇ ।
ಧ್ರುವೇ ಸ್ಯಾತಾಂ ತತೋ ರಾಗೋ ದ್ವೇಷಶ್ಚೈವ ತತಃ ಕ್ರಿಯಾಃ ॥ ೩ ॥
ಧರ್ಮಾಧರ್ಮೌ ತತೋಽಜ್ಞಸ್ಯ ದೇಹಯೋಗಸ್ತಥಾ ಪುನಃ ।
ಏವಂ ನಿತ್ಯಪ್ರವೃತ್ತೋಽಯಂ ಸಂಸಾರಶ್ಚಕ್ರವದ್ ಭೃಶಮ್ ॥ ೪ ॥

## ರಾಮಗೀತೆ ೯-೧೦

ಅಜ್ಞಾನಂ ತಸ್ಯ ಮೂಲಂ ಸ್ಯಾದಿತಿ ತದ್ಧಾನಮಿಷ್ಯತೇ ॥ ೪ ೧/೨ ॥
ವಿದ್ಯೈವಾಜ್ಞಾನಹಾನಾಯ ನ ಕರ್ಮಾಪ್ರತಿಕೂಲತಃ ।
ನಾಜ್ಞಾನಸ್ಯಾಪ್ರಹಾಣೇ ಹಿ ರಾಗದ್ವೇಷಕ್ಷಯೋ ಭವೇತ್ ॥ ೬ ॥
ರಾಗದ್ವೇಷಕ್ಷಯಾಭಾವೇ ಕರ್ಮ ದೋಷೋದ್ಭವಂ ಧ್ರುವಮ್ ।
ತಸ್ಮಾನ್ನಿಃಶ್ರೇಯಸಾರ್ಥಾಯ ವಿದ್ಯೈವಾತ್ರ ವಿಧೀಯತೇ ॥ ೭ ॥

## ರಾಮಗೀತೆ ೧೧-೧೩

ನನು ಕರ್ಮ ತಥಾ ನಿತ್ಯಂ ಕರ್ತವ್ಯಂ ಜೀವನೇ ಸತಿ ।
ವಿದ್ಯಾಯಾಃ ಸಹಕಾರಿತ್ವಂ ಮೋಕ್ಷಂ ಪ್ರತಿ ಹಿ ತದ್ ವ್ರಜೇತ್ ॥ ೮ ॥
ಯಥಾ ವಿದ್ಯಾ ತಥಾ ಕರ್ಮ ಚೋದಿತತ್ವಾವಿಶೇಷತಃ ।
ಪ್ರತ್ಯವಾಯಸ್ಮೃತೇಶ್ಚೈವ ಕಾರ್ಯಂ ಕರ್ಮ ಮುಮುಕ್ಷುಭಿಃ ॥ ೯ ॥
ನನು ಧ್ರುವಫಲಾ ವಿದ್ಯಾ ನಾನ್ಯತ್ ಕಿಞ್ಚಿದಪೇಕ್ಷತೇ ।
ನಾಗ್ನಿಷ್ಟೋಮೋ ಯಥೈವಾನ್ಯದ್ಧ್ರುವಕಾರ್ಯೋಽಪ್ಯಪೇಕ್ಷತೇ ॥ ೧೦ ॥
ತಥಾ ಧ್ರುವಫಲಾ ವಿದ್ಯಾ ಕರ್ಮನಿತ್ಯಮಪೇಕ್ಷತೇ ॥ ೧೦ ೧/೨ ॥

## ರಾಮಗೀತೆ ೧೪-೧೬

ಇತ್ಯೇವಂ ಕೇಚಿದಿಚ್ಛನ್ತಿ ನ ಕರ್ಮಾಪ್ರತಿಕೂಲತಃ ॥ ೧೧ ॥
ವಿದ್ಯಾಯಾಃ ಪ್ರತಿಕೂಲಂ ಹಿ ಕರ್ಮ ಸ್ಯಾತ್ ಸಾಭಿಮಾನತಃ ।

ನಿರ್ವಿಕಾರಾತ್ಮಬುದ್ಧಿಶ್ಚ ವಿದ್ಯೇತೀಹ ಪ್ರಕೀರ್ತಿತಾ ॥ ೧೨ ॥
ಅಹಂ ಕರ್ತಾ ಮಮೇದಂ ಸ್ಯಾದಿತಿ ಕರ್ಮ ಪ್ರವರ್ತತೇ ॥ ೧೨ ೧/೨ ॥
ಕಾರಕಾಣ್ಯುಪಮೃದ್ನಾತಿ ವಿದ್ಯಾ ಬುದ್ಧಿಮಿವೋಷರೇ ।
ತತ್ಸಸ್ತ್ಯಮತಿಮಾದಾಯ ಕರ್ಮ ಕರ್ತುಂ ವ್ಯವಸ್ಯತಿ ॥ ೧೪ ॥
ವಿರುದ್ಧತ್ವಾದತಃ ಶಕ್ಯಂ ಕರ್ಮ ಕರ್ತುಂ ನ ವಿದ್ಯಯಾ।
ಸಹೈವ ವಿದುಷಾ ತಸ್ಮಾತ್ ಕರ್ಮ ಹೇಯಂ ಮುಮುಕ್ಷುಣಾ ॥ ೧೫ ॥

ರಾಮಗೀತೆ ೧೬-೨೦

ದೇಹಾದ್ಯೈರವಿಶೇಷೇಣ ದೇಹಿನೋ ಗ್ರಹಣಂ ನಿಜಮ್ ।
ಪ್ರಾಣಿನಾಂ ತದವಿದ್ಯೋತ್ಥಂ ತಾವತ್ಕರ್ಮವಿಧಿರ್ಭವೇತ್ ॥ ೧೬ ॥
ನೇತಿ ನೇತೀತಿ ದೇಹಾದೀನಪೋಹ್ಯಾತ್ಮಾವಶೇಷಿತಃ ।
ಅವಿಶೇಷಾತ್ಮಬೋಧಾರ್ಥಂ ತೇನಾವಿದ್ಯಾ ನಿವರ್ತಿತಾ ॥ ೧೭ ॥
ನಿವೃತ್ತಾ ಸಾ ಕಥಂ ಭೂಯಃ ಪ್ರಸೂಯೇತ ಪ್ರಮಾಣತಃ ।
ಅಸತ್ಯೇವಾವಿಶೇಷೇಽಪಿ ಪ್ರತ್ಯಗಾತ್ಮನಿ ಕೇವಲೇ ॥ ೧೮ ॥
ನ ಚೇದ್ಭೂಯಃ ಪ್ರಸೂಯೇತ ಕರ್ತಾ ಭೋಕ್ತೇತಿ ಧೀಃ ಕಥಮ್ ।
ಸದಸ್ಮೀತಿ ಚ ವಿಜ್ಞಾತೇ ತಸ್ಮಾದ್ ವಿದ್ಯಾಸಹಾಯಿಕಾ ॥ ೧೯ ॥

ರಾಮಗೀತೆ ೨೧

ಅತ್ಯರೇಚಯದಿತ್ಯುಕ್ತೋ ನ್ಯಾಸಃ ಶ್ರುತ್ಯಾತ ಏವ ಹಿ ।
ಕರ್ಮಭ್ಯೋ ಮಾನಸಾನ್ತೇಭ್ಯ ಏತಾವದಿತಿ ವಾಜಿನಾಮ್ ॥ ೨೦ ॥
ಅಮೃತತ್ವಂ ಶ್ರುತಂ ಯಸ್ಮಾತ್ ತ್ಯಾಜ್ಯಂ ಕರ್ಮ ಮುಮುಕ್ಷುಭಿಃ॥

ರಾಮಗೀತೆ ೨೨

ಅಗ್ನಿಷ್ಟೋಮವದಿತ್ಯುಕ್ತಂ ತತ್ರೇದಮಭಿಧೀಯತೇ ॥ ೨೧ ॥
ನೈಕಕಾರಕಸಾಧ್ಯತ್ವಾತ್ ಫಲಾನ್ಯತ್ವಾಚ್ಚ ಕರ್ಮಣಃ ।
ವಿದ್ಯಾ ತದ್ವಿಪರೀತಾತೋ ದೃಷ್ಟಾನ್ತೋ ವಿಷಮೋ ಭವೇತ್ ॥ ೨೨ ॥

ರಾಮಗೀತೆ ೨೩

ಪ್ರತ್ಯವಾಯಸ್ತು ತಸ್ಯೈವ ಯಸ್ಯಾಹಙ್ಕಾರ ಇಷ್ಯತೇ ।
ಅಹಙ್ಕಾರಫಲಾರ್ಥಿತ್ವೇ ವಿದ್ಯೇತೇ ನಾತ್ಮವೇದಿನಃ ॥ ೨೪ ॥

## ಶ್ಲೋಕಾನುಕ್ರಮಣಿಕೆ


ಅಕಾರಸಂಜ್ಞಃ ೪೯
ಅಜ್ಞಾನಮೇವಾಸ್ಯ ೯
ಅನಾತ್ಮಬುದ್ಧ್ಯಾವರಣಾತ್ ೨೦
ಅನಾದ್ಯವಿದ್ಯೋದ್ಭವ- ೪೦
ಅಹಂ ಪ್ರಮಾತ್ರೋsಸ್ಮಿ ೫
ಆತ್ಮಸ್ವಭಾವೇನ ೫೬
ಆದೌ ಚ ಮಧ್ಯೇ ಚ ೫೫
ಆದೌ ಪದಾರ್ಥಾವಗತಿರ್ಹಿ ೨೫
ಆದೌ ಸ್ವವರ್ಣಾಶ್ರಮವರ್ಣಿತಾಃ ೭
ಇಜ್ಯಾನುರಾಗಾದಿ- ೩೯
ಇತ್ಥಂ ಯಮೀಕ್ಷೇತ ೫೭
ಏಕಾತ್ಮಕತ್ವಾತ್ ಪುನಃ ೨೭
ಏವಂವಿಧೋ ಜ್ಞಾನಮಯಃ ೨೬
ಏವಂ ಸದಾತ್ಮಾನಮ್ ೪೫
ಏವಂ ಸದಾ ಜಾತ- ೫೨
ಏವಂ ಸದಾಭ್ಯಸ್ತ ೫೩
ಕದಾಚಿದಾತ್ಮಾ ೩೫
ಕದಾಚಿದೇಕಾನ್ತ ಉಪಸ್ಥಿತಮ್ ೩
ಕರ್ಮಾಕೃತೌ ದೇಹಮಯೇ ೧೮ ೧/೨
ಕೇಚಿದ್ವದನ್ತೀತಿ ೧೯
ಕೋಶೇಷು ಪಞ್ಚಸ್ವಪಿ ೩೧
ಕ್ರಿಯಾಶರೀರೋದ್ಭವಹೇತುರಾದೃತಾ ೮
ಗುರೋಃ ಸಕಾಶಾದಪಿ ೪೨
ಚಿದ್ಭಾಸ್ಯ ಸಾಕ್ಷ್ಯಾತ್ಮಧಿಯಾಮ್ ೪೧
ತತೋ ಜಗನ್ಮಙ್ಗಲಮಙ್ಗಲಾತ್ಮನಾ ೧
ತಸ್ಮಾತ್ ತ್ಯಜೇತ್ಕಾರ್ಯಮಶೇಷತಃ ೧೬
ತ್ವಂ ಶುದ್ಧಬುದ್ಧೋsಸಿ ೪
ದೇಹೇsಸ್ಮಿನ್ ಯಥಾ ಗ- ೩೩
ಧ್ಯಾತ್ವೈವಮಾತ್ಮಾನಮಹರ್ನಿಶಮ್ ೫೪
ನಹಿ ಕ್ರಿಯಾ ವೇದಮುಖೇನ ೧೧
ನಹಿ ಪ್ರತಾಪ್ಯಾಧ್ಯವಕಾರ್ಯಕಾರಿಣೀ ೧೨
ನ ಚ್ಛೇತ್ತುಕಾರ್ಯೋsಪಿ ಹಿ ೧೩
ನಾಜ್ಞಾನಹಾನಿರ್ನ ಚ ೧೦
ನೇತಿ ಪ್ರಮಾಣೇನ ೩೪
ಪೂರ್ವಂ ಸಮಾಧೇರಖಿಲಮ್ ೪೮
ಪ್ರಕಾಶರೂಪೋsಹಮ್ ೪೫
ಪ್ರತ್ಯಕ್ಷರೋಕ್ಷಾದಿ ವಿರೋಧಮ್ ೨೬
ಬುದ್ಧೇಸ್ತ್ರಿಧಾವೃತ್ತಿರಪೀಹ ೩೭
ಭ್ರಾತರ್ಯದೀದಮ್ ೬೦
ಮಕಾರಮಪ್ಯಾತ್ಮನಿ ೫೦ ೧/೨
ಯದನ್ಯದನ್ಯತ್ರ ೩೭
ಯದಾ ಪರಾತ್ಮಾತ್ಮ ೧೮
ಯದಿ ಸ್ಮ ನಷ್ಟಾ ೨೦
ಯಃ ಸೇವತೇ ಮಾಮ್ ೬೧
ಯಾವಚ್ಛರೀರಾದಿಷು ೧೭
ಯಾವನ್ನ ಪಶ್ಯೇತ್ ೫೮
ರಸಾದಿಪಞ್ಚೀಕೃತ- ೨೮
ರಹಸ್ಯಮೇತತ್ ೫೯
ವಿಕಲ್ಪಮಾಯಾರಹಿತೇ ೩೮
ವಿಜ್ಞಾನಮೇತದಖಿಲ ೬೨
ವಿದ್ಯಾಸಮತ್ವೇನ ತು ೨೨
ವಿವಿಕ್ತ ಆಸೀನಃ ೪೬
ವಿಶುದ್ಧವಿಜ್ಞಾನ- ೧೫
ವಿಶ್ವಂ ತ್ವಕಾರಮ್ ೫೦
ವಿಶ್ವಂ ಯದೇತತ್ ೪೭
ಶ್ರದ್ಧಾನ್ವಿತಸ್ತತ್ತ್ವಮಸೀತಿ ೨೪
ಶ್ರುತಿಪ್ರಮಾಣಾಭಿವಿನಾಶಿತಾ ೧೯
ಶ್ರುತ್ವಾಥ ಸೌಮಿತ್ರಿ- ೬
ಸದೈವ ಮುಕ್ತೋsಹಮ್ ೪೪
ಸಪ್ರತ್ಯಯೋsಪಿ ೨೩
ಸಾ ತೈತ್ತಿರೀಯಶ್ರುತಿರಾಹ ೨೯
ಸೂಕ್ಷ್ಮಂ ಮನೋಬುದ್ಧಿ ೨೯
ಸೋsಹಂ ಪರಂ ಬ್ರಹ್ಮ ೧೧
ಸೌಮಿತ್ರಿಣಾ ಪೃಷ್ಟಃ ೨